ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 12
Issue - 8
Pages - 24
₹ - 12
August - 2015




## 69 ನೇ ಸ್ವಾತಂತ್ರ್ಯೋತ್ಸವ ಸಂಭ್ರಮ

## 14 ನೇ ಸಾಮಾನ್ಯ ಸಭೆ

20, ಆಗಸ್ಟ್ 2015,
ಜ್ಞಾನಜ್ಯೋತಿ ಸಭಾಂಗಣ,
ಸೆಂಟ್ರಲ್ ಕಾಲೇಜು ಆವರಣ,
ಬೆಂಗಳೂರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ISO 9001:2008 ಪ್ರಮಾಣ ಪತ್ರ



ಹಿಂದುಸ್ತಾನವು ಎಂದೂ ಮರೆಯದ ಭಾರತರತ್ನ ಅಬ್ದುಲ್ ಕಲಾಂ

ಸೌಹಾರ್ದ ಸಹಕಾರಿಗಳ ಸಂಖ್ಯೆ : 3285 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 826

# ತೆರಿಗೆ ಇಲಾಖೆಯ ನೋಟೀಸಿನ ಕಿರುಕುಳ ತಪ್ಪಿಸಲು ಕ್ರಮ, ನೇರ ತೆರಿಗೆ ಜಾರಿಗೆ ಕೊಡದಂತೆ ಮನವಿ :

## ಸಹಕಾರಿಗಳ ನಿಯೋಗಕ್ಕೆ ಸ್ಪಂದಿಸಿದ ಹಣಕಾಸು ಸಚಿವ ಶ್ರೀ ಅರುಣ ಜೇಟ್ಲಿ



"ನೇರ ತೆರಿಗೆ ಸಂಹಿತೆ" ಅದರಿಂದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಆಗಬಹುದಾದ ಅನಾನುಕೂಲಗಳ ಬಗ್ಗೆ ವಿವರಿಸಿದಾಗಲೂ, ಸಮಾಧಾನದಿಂದ ವಿಷಯ ತಿಳಿದು ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ತೊಂದರೆಯಾಗಬಹುದಾದ ವಿಷಯಗಳನ್ನು ಕೈಬಿಡಲು ಪರಿಶೀಲಿಸಿ ಕ್ರಮವಿಡುವುದಾಗಿ ತಿಳಿಸಿದರಲ್ಲದೇ, ದೇಶದಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಕೇಂದ್ರ ಸರಕಾರ ಬದ್ಧವಾಗಿದೆ ಎಂದು ತಿಳಿಸಿರುವುದು ಸಂತೋಷದ ವಿಷಯ.

ಆತ್ಮೀಯ ಸಹಕಾರಿ ಬಂಧುಗಳೇ,

ತಮಗೆಲ್ಲ 69ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ವರಮಹಾಲಕ್ಷ್ಮೀ ಹಬ್ಬದ ಶುಭಾಶಯಗಳು. ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯವರು ಕಳೆದ 3–4 ವರ್ಷಗಳಿಂದ ನೋಟೀಸು ಜಾರಿಮಾಡುವುದು ಪ್ರಾರಂಭವಾದ ನಂತರ ಆದಾಯ ತೆರಿಗೆ ಅಧಿಕಾರಿಗಳ ವಿರುದ್ಧ ಮೇಲ್ಮನವಿ ಸಲ್ಲಿಸಿ, ಸೌಹಾರ್ದ ಸಹಕಾರಿಗಳ ಪರವಾಗಿ ಅನೇಕ ತೀರ್ಪುಗಳು ಬಂದಾಗ್ಯೂ, ಅವುಗಳನ್ನು ಅವರಿಗೆ ಒದಗಿಸಿದ್ದಾಗ್ಯೂ, ನೋಟೀಸಿನ ಕಿರುಕುಳಗಳು ಕಡಿಮೆಯಾಗದೇ ಮುಂದುವರೆಯುತ್ತಿರುವುದನ್ನು ತಪ್ಪಿಸಲು ಕಳೆದ ತಿಂಗಳು ಕೇಂದ್ರ ನೇರ ತೆರಿಗೆ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಅನಿತಾ ಕಪೂರರವರನ್ನು ಭೇಟಿಯಾಗಿ ವಿವರಣೆ ನೀಡಲಾಗಿತ್ತು. ಅವರು ಸಹ ನಮ್ಮ ಮನವಿಯನ್ನು ಸಹಾನುಭೂತಿಯಿಂದ ಪರಿಶೀಲಿಸಿ ಸೂಕ್ತ ಕ್ರಮವಿಡುವುದಾಗಿ ಭರವಸೆ ನೀಡಿದ್ದರು.

ಇದೇ ದಿನಾಂಕ 2–7–2015 ರಂದು ಕೇಂದ್ರ ಹಣಕಾಸು ಸಚಿವರಾದ ಶ್ರೀ ಅರುಣ ಜೇಟ್ಲಿ ಹಾಗೂ ಕೇಂದ್ರ ವಾಣಿಜ್ಯ ಹಾಗೂ ಉದ್ದಿಮೆ ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಇವರುಗಳನ್ನು ಭೇಟಿಯಾಗಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹಾಗೂ ಕ್ರೆಡಿಟ್ ಸಹಕಾರ ಸಂಘಗಳಿಗೆ ಆದಾಯ ತೆರಿಗೆ ಇಲಾಖೆಯವರು ನೀಡುತ್ತಿರುವ ಕಿರುಕುಳದ ಬಗ್ಗೆ ವಿವರಿಸಿ, ಈ ಬಗ್ಗೆ ಕೂಡಲೇ ಸೂಕ್ತ ಕ್ರಮವಿಡುವಂತೆ ಮಾಡಿದ ಮನವಿಯನ್ನು ಸಚಿವರು ಸಮಾಧಾನದಿಂದ ಪರಿಶೀಲಿಸಿ, ಸೂಕ್ತ ಕ್ರಮವಿಡುವುದಾಗಿ ತಿಳಿಸಿರುವುದು ಸಹಕಾರಿಗಳೆಲ್ಲ ಸಂತಸಪಡುವ ವಿಷಯ. ಇದೇ ಸಂದರ್ಭದಲ್ಲಿ ಮುಂಬರುವ ದಿನಗಳಲ್ಲಿ ಜಾರಿಗೆ ಕೊಡಬಹುದಾದ ಕೇಂದ್ರದ "ನೇರ ತೆರಿಗೆ ಸಂಹಿತೆ" ಅದರಿಂದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಆಗಬಹುದಾದ ಅನಾನುಕೂಲಗಳ ಬಗ್ಗೆ ವಿವರಿಸಿದಾಗಲೂ, ಸಮಾಧಾನದಿಂದ ವಿಷಯ ತಿಳಿದು ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ತೊಂದರೆಯಾಗಬಹುದಾದ ವಿಷಯಗಳನ್ನು ಕೈಬಿಡಲು ಪರಿಶೀಲಿಸಿ ಕ್ರಮವಿಡುವುದಾಗಿ ತಿಳಿಸಿದರಲ್ಲದೇ, ದೇಶದಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಕೇಂದ್ರ ಸರಕಾರ ಬದ್ಧವಾಗಿದೆ ಎಂದು ತಿಳಿಸಿರುವುದು ಸಂತೋಷದ ವಿಷಯ.

ಮಾಜಿ ಮುಖ್ಯಮಂತ್ರಿ, ಹಾಲಿ ಸಂಸದರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಈ ನಿಯೋಗದ ನೇತೃತ್ವವನ್ನು ವಹಿಸಿ, ಮಾನ್ಯ ಹಣಕಾಸು ಸಚಿವರಿಗೆ ಸಹಕಾರಿಗಳ ಪರವಾಗಿ ನಿವೇದಿಸಿದ್ದು ಸಹಕಾರಿಗಳಿಗೆಲ್ಲ ಸಂತೋಷವನ್ನುಂಟು ಮಾಡಿದೆ. ಸಹಕಾರಿಗಳ ನಿಯೋಗದಲ್ಲಿ ಶಿವಮೊಗ್ಗ ಮಾಮ್ಕೋಸ ಉಪಾಧ್ಯಕ್ಷರಾದ ಶ್ರೀ ಯಡಗೆರೆ ಸುಬ್ರಮಣ್ಯ, ಸಾಗರದ ಸುವಿಧಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಚಾರ್ಟೆರ್ಡ್ ಅಕೌಂಟೆಂಟ್ ಶ್ರೀ ಬಿ.ವಿ.ರವೀಂದ್ರನಾಥ, ಕ್ಯಾಮ್‌ನ ಅಧ್ಯಕ್ಷರಾದ ಸೊರಬದ ಶ್ರೀ ಎಚ್.ಎಸ್. ಮಂಜಪ್ಪ ಹೊಸಬಾಳೆ, ಶಿರಸಿ ತೋಟಗಾರ್ಸ್ ಅಧ್ಯಕ್ಷರಾದ ಶ್ರೀ ಶಾಂತಾರಾಮ ಹೆಗಡೆ, ಚನ್ನಗಿರಿಯ ಕಾಗ್ಕಾ ಅಧ್ಯಕ್ಷರಾದ ಶ್ರೀ ಹೆಚ್.ಎಮ್.ರವಿ, ತುಮ್ಕೋಸ ಅಧ್ಯಕ್ಷರಾದ ಶ್ರೀ ಶಿವಕುಮಾರ ಮುಂತಾದವರು ಉಪಸ್ಥಿತರಿದ್ದು, ರಾಜ್ಯದ ಕೃಷಿ ಬೆಳೆಗಾರರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಕ್ರಮವಿಡಬೇಕೆಂದು ಕೇಂದ್ರ ಕೃಷಿ ಸಚಿವರಿಗೆ ಮನವಿ ಮಾಡಿರುವುದು, ಇದಕ್ಕೆ ಕೇಂದ್ರ ಕೃಷಿ ಸಚಿವರು ನೀಡಿರುವ ಭರವಸೆ ರಾಜ್ಯದ ಅಡಿಕೆ ಬೆಳೆಗಾರರಿಗೆ ಸಮಾಧಾನವನ್ನು ನೀಡುತ್ತದೆ ಎಂದು ಆಶಿಸಲಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹಾಗೂ ಕ್ರೆಡಿಟ್ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಕಿರುಕುಳಗಳು ನಿಲ್ಲಬೇಕು. ನೇರ ತೆರಿಗೆ ಸಂಹಿತೆ ಜಾರಿಗೆ ಬರುವಾಗ ಸಹಕಾರಿ ಸಂಸ್ಥೆಗಳಿಗೆ ವಿನಾಯಿತಿ ಇರಬೇಕು. ಇದು ಸಂಯುಕ್ತ ಸಹಕಾರಿಯ ನಿಲುವು. ಈ ಹೋರಾಟದಲ್ಲಿ ಸಂಯುಕ್ತ ಸಹಕಾರಿಯು ಮುಂಚೂಣಿಯಲ್ಲಿದ್ದು, ಸೌಹಾರ್ದ ಸಹಕಾರಿಗಳ ಹಿತರಕ್ಷಣೆಯೇ ಮುಖ್ಯ ಉದ್ದೇಶವೆಂಬುದನ್ನು ತಮ್ಮೆಲ್ಲರ ಗಮನಕ್ಕೆ ತರುತ್ತಾ ಈ ನಿಟ್ಟಿನಲ್ಲಿ ತಮ್ಮ ನಿರಂತರ ಸಹಕಾರವನ್ನು ಅಪೇಕ್ಷಿಸಲಾಗಿದೆ.

**ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

## ಒಳ ಪುಟಗಳಲ್ಲಿ . . .

ಜ್ಞಾನ ಜ್ಯೋತಿ ........ 4
ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ........ 5
ಸೌಹಾರ್ದ ಸಹಕಾರಿಗಳ ಹಾಗೂ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಕೇಂದ್ರ ಸಚಿವರ ಭೇಟಿ ಹಾಗೂ ಮನವಿ ಸಲ್ಲಿಕೆ ........ 6
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ISO 9001:2008 ಪ್ರಮಾಣ ಪತ್ರ ........ 7
ಸೌಹಾರ್ದ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗೆ ಮೂಲ ಮಾಹಿತಿ ತರಬೇತಿ ಕಾರ್ಯಕ್ರಮ ........ 8
ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿಷಯಗಳು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳ ಪಾತ್ರ ಕುರಿತು ಸಂವಾದ ಕಾರ್ಯಕ್ರಮ ........ 9
ಶಿಬಿರಾರ್ಥಿಗಳ ಅನಿಸಿಕೆಗಳು ........ 10
ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರಿಂದ ರಾಜ್ಯದಾದ್ಯಂತ ಪ್ರವಾಸ ಹಾಗೂ ವಿವಿಧ ಸಹಕಾರಿಗಳಿಗೆ ಭೇಟಿ ........ 12
ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 ಮತ್ತು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2004 ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸದು. ........ 16
ಮೈಸೂರು ವಿಭಾಗೀಯ ಕಛೇರಿ ಉದ್ಘಾಟನೆ ಮತ್ತು ಸಹಕಾರ ಸಮಾವೇಶದ ಕುರಿತು ಮೈಸೂರು ವಿಭಾಗದ ವಿವಿಧ ಜಿಲ್ಲೆಗಳಲ್ಲಿ ಸಂಪರ್ಕ ಸಭೆ ಹಾಗೂ ಪತ್ರಿಕಾಗೋಷ್ಠಿ ........ 18
ಸಂಯುಕ್ತ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆ ........ 20
ಸಹಕಾರಿ ಕ್ಷೇತ್ರದಲ್ಲಿ ವ್ಯವಹಾರ ನಿರ್ವಹಣೆಯ ಪಾತ್ರ ........ 21
ಸದೃಢ ಸಮಾಜ ರಚನೆ ಹಾಗೂ ಮಹಿಳಾ ಸಹಕಾರಿಗಳು ........ 22
RBI News for July - 2015 ........ 23
ಸಹಕಾರಿಗಳಲ್ಲಿ ಪಾರದರ್ಶಕ ಆಡಳಿತ ವ್ಯವಸ್ಥೆಯ ಅಗತ್ಯತೆ ........ 24

# ಸಂಪಾದಕೀಯ

## "ಹೂಡಿಕೆದಾರರ ಜಾಗೃತಿ ಸಂಯುಕ್ತ ಸಹಕಾರಿಯ ಕಾಳಜಿ"

ರಾಜ್ಯದ ಸೌಹಾರ್ದ ಸಹಕಾರಿಗಳ ಸಂಖ್ಯೆ ಕಳೆದ 15 ವರ್ಷಗಳಲ್ಲಿ 3285 ತಲುಪಿದೆ. ಅತ್ಯಂತ ಉತ್ತಮ ಹಾಗೂ ವಿಭಿನ್ನ ರೀತಿಯ ಮತ್ತು ಸಹಕಾರ ಕ್ಷೇತ್ರದಲ್ಲಿ ಹೊಸ ಆಯಾಮವನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸಂತೋಷದ ವಿಷಯ. ಉತ್ತಮ ಬೆಳೆಯ ಜೊತೆಗೆ ಕಸಕಡ್ಡಿಗಳು ಬೆಳೆಯುವಂತೆ ಎಲ್ಲೋ ಒಂದೆರಡು ಸೌಹಾರ್ದ ಸಹಕಾರಿಗಳಲ್ಲಿ ಸಮಾಜಘಾತುಕ ವರ್ಗದವರು ಸೇರಿಕೊಂಡು ಠೇವಣಿದಾರರ ಠೇವಣಿಯನ್ನು ಬೇರೆ ಬೇರೆ ವ್ಯವಹಾರಗಳಲ್ಲಿ ತೊಡಗಿಸಿ, ಠೇವಣಿದಾರರಿಗೆ ಮೋಸಮಾಡಲು ಹೋಗಿ ತೊಂದರೆಗಳಿಗೆ ಸಿಲುಕಿಕೊಂಡಿರುವುದು ಬೆಳಕಿಗೆ ಬಂದಿರುವ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯು ಸೂಕ್ತ ಕಾನೂನು ಕ್ರಮವಿಡುತ್ತಿದೆ. ಈ ಸೌಹಾರ್ದ ಸಹಕಾರಿಗಳಿಗೆ ಕಾನೂನು ರೀತ್ಯಾ ಕ್ರಮ ಜಾರಿ ಮಾಡಿ, ಸದಸ್ಯರ ಠೇವಣಿಗಳನ್ನು ಮರುಪಾವತಿಸಲು ಕ್ರಮವಿಡಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಠೇವಣಿದಾರರಲ್ಲಿ (ಹೂಡಿಕೆದಾರರಲ್ಲಿ) ಈ ಬಗ್ಗೆ ತಿಳುವಳಿಕೆ ಮೂಡಿಸುವುದು ಅಗತ್ಯವೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಅವಶ್ಯಕವೆಂದು ಪರಿಗಣಿಸಿದೆ. ಹೂಡಿಕೆದಾರರ ಜಾಗೃತಿ ಸಂಯುಕ್ತ ಸಹಕಾರಿಯ ಕಾಳಜಿಯಾಗಿದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬಲಸಂವರ್ಧನೆಗೆ ಈ ಕ್ರಮ ಅಗತ್ಯವೆನಿಸಿದೆ. ಈ ಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಕೈಜೋಡಿಸುವುದು ಅಷ್ಟೇ ಅಗತ್ಯ.

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ನಾಲ್ಕು ವಿಭಾಗಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯವರು ಹೂಡಿಕೆದಾರರ ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡು ಸೌಹಾರ್ದ ಸಹಕಾರಿಗಳಲ್ಲಿ ಠೇವಣಿಗಳ ಬಗ್ಗೆ ಯಾವುದೇ ರೀತಿಯ ಅನುಮಾನಗಳು ಬಾರದಂತೆ ವಿಶ್ವಾಸಾರ್ಹತೆಯನ್ನು ಗಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ಕೆಲವು ಸೌಹಾರ್ದ ಸಹಕಾರಿಗಳ ಹೆಸರಿನಲ್ಲಿ ಕೆಲವು ಕಂಪನಿಗಳು, ಸಂಸ್ಥೆಗಳು ತಮ್ಮ ಠೇವಣಿಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಠೇವಣಿದಾರರಿಗೆ ಹೆಚ್ಚಿನ ಬಡ್ಡಿಯನ್ನು ನೀಡುವುದರ ಮೂಲಕ ಮಧ್ಯವರ್ತಿಗಳಿಗೆ ಹೆಚ್ಚಿನ ಕಮೀಷನ್ ನೀಡಿ, ಆಮಿಷವನ್ನು ಒಡ್ಡಿ, ಠೇವಣಿದಾರರಿಗೆ ಮೋಸಮಾಡುವ ಪ್ರಕರಣಗಳನ್ನು ಗುರುತಿಸುವಲ್ಲಿ ಸಂಯುಕ್ತ ಸಹಕಾರಿಗೆ ಸಹಕರಿಸುವುದು ಅತ್ಯಂತ ಮಹತ್ವದ ಕಾರ್ಯ ಎನಿಸುತ್ತದೆ.

"ಹೂಡಿಕೆದಾರರ ಜಾಗೃತಿ ಸಂಯುಕ್ತ ಸಹಕಾರಿಯ ಕಾಳಜಿ" ಕೇವಲ ಸಂಯುಕ್ತ ಸಹಕಾರಿಯದ್ದಾಗಿರದೇ, ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳದ್ದು ಎಂಬ ಭಾವನೆ ಸೌಹಾರ್ದ ಸಹಕಾರಿಗಳಲ್ಲಿ ಬೇರೂರಬೇಕು. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಗುಣಾತ್ಮಕವಾಗಿ ಬೆಳೆಯಬೇಕು. ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ಹೂಡಿಕೆ ಮಾಡಬಯಸುವವರಲ್ಲಿ ಇರುವ ಎಲ್ಲಾ ಸಂಶಯಗಳು, ಅನುಮಾನಗಳು ನಿವಾರಣೆಯಾಗಿ ವಿಶ್ವಾಸಾರ್ಹತೆ ಬೆಳೆಯಬೇಕೆಂಬುದೇ ಈ ಅಭಿಯಾನದ ಉದ್ದೇಶ. ■

## ಸತ್ಯಾಚರಣೆ

ಋಷಿಗಳ ಹೃದಯ ಕರುಣಾಪೂರ್ಣ. ಪುರಾತನ ಕಾಲದಲ್ಲಿ ಎಳೆಯ ಮಕ್ಕಳು ವಿದ್ಯಾರ್ಜನೆಗಾಗಿ ಋಷಿಗಳ ಹತ್ತಿರ ಹೋದರು. ಅರಣ್ಯದ ಮಧ್ಯದ ಪ್ರಶಾಂತ ಪರಿಸರ, ಕುಟೀರವಾಸ. ಹತ್ತು ಹನ್ನೆರಡು ವರುಷ ಅವರು ಆ ಮಕ್ಕಳಿಗೆ ತಮ್ಮ ಆಶ್ರಮದಲ್ಲಿ ಒಲವಿನ ಆಶ್ರಯವನ್ನಿತ್ತರು. ಪ್ರಾಪಂಚಿಕ ಜೀವನಕ್ಕೆ ಬೇಕಾಗುವ ಎಲ್ಲಾ ವಿದ್ಯೆಗಳನ್ನು ಅವರಿಗೆ ನೀಡಿದರು. ಅವರ ವಿದ್ಯಾರ್ಜನೆ ಪೂರ್ಣವಾದ ನಂತರ ಅವರವರ ಗ್ರಾಮಗಳಿಗೆ ಅವರನ್ನು ವಿದ್ಯಾಧರರನ್ನಾಗಿ, ಜ್ಞಾನದ ಜ್ಯೋತಿಗಳನ್ನಾಗಿ ಮಾಡಿ ಕಳುಹಿಸಿಕೊಡುವಾಗ ವಾತ್ಸಲ್ಯ ಮೂರ್ತಿಗಳಾದ ಋಷಿಗಳು ಆ ಮಕ್ಕಳಿಗೆ ಎಂಥ ಸುಂದರ ಸಂದೇಶ ನೀಡಿದರು! ಅದು ಅವರ ಬದುಕಿಗೆ ಭದ್ರ ಬುನಾದಿ ಆಯಿತು. ಹೆಚ್ಚೇನು ಅದರಿಂದ ಅವರ ಬದುಕೇ ಸಂತಸದ ಹೊನಲಾಯಿತು. ಆ ಮಹರ್ಷಿಗಳು ನೀಡಿದ ಆ ಅಮರ ಸಂದೇಶ ಅದೆಷ್ಟು ಸೊಗಸಾಗಿದೆ ನೋಡಿ.




ಸತ್ಯಂ ವದ। ಧರ್ಮಂ ಚರ। ಏಷ ಆದೇಶ। ಏಷ ಉಪದೇಶ: ಏತದನುಶಾಸನಮ್।

ಸತ್ಯವನ್ನೇ ನುಡಿಯಿರಿ. ಧರ್ಮದಂತೆಯೇ ನಡೆಯಿರಿ. ಇದುವೇ ಆದೇಶ (ಆಜ್ಞೆ) ಇದುವೆ ಉಪದೇಶ (ಬೋಧನೆ). ಇದುವೇ ಅನುಶಾಸನ (ಕಾಯ್ದೆ) ಸುಂದರ ಶಿಕ್ಷಣ!! ಇದಕ್ಕಿಂತ ಮಿಗಿಲಾದ ಶುಭಸಂದೇಶ ಇನ್ನಾವುದಿರಲು ಸಾಧ್ಯ? ಇವೆರಡು ನುಡಿಗಳನ್ನು ಪಾಲಿಸಿದರೆ ಸಾಕು, ನಮ್ಮ ಬದುಕು ಭವ್ಯ-ದಿವ್ಯವಾಗುವುದರಲ್ಲಿ ಸಂದೇಹವಿಲ್ಲ. ಸತ್ಯದ ನುಡಿ, ಧರ್ಮದ ನಡೆ ಇಲ್ಲದ ಬದುಕು? ಎಷ್ಟು ಕಲಿತರೇನು, ಓದಿದರೇನು ಇವೆರಡನ್ನು ಕಲಿತರೆ ಸಾಕು, ಎಲ್ಲವನ್ನೂ ಕಲಿತಂತೆಯೇ ಅಲ್ಲವೇ?. ನಮ್ಮ ಪ್ರಪಂಚ ಅಥವಾ ಬದುಕು ಸತ್ಯದ ಮೇಲೆ ನಿಂತಿದೆ ವಿನಾ ಅಸತ್ಯದ ಮೇಲೆ ಸುಳ್ಳಿನ ಮೇಲೆ ನಿಂತಿಲ್ಲ. ನಾಳೆ ಬರುತ್ತೇನೆ ಎಂದು ಹೇಳಿ ಹೋದ ಸೂರ್ಯನು ಬರದಿದ್ದರೆ, ಗಾಳಿ ಬೀಸದಿದ್ದರೆ, ಮಳೆಯಾಗದಿದ್ದರೆ ಜಗತ್ತು ನಡೆಯುವುದಾದರೂ ಹೇಗೆ? ನೀರು ಹನಿಸಿದರೆ ಮಾತ್ರ ಮರವು ಹೂವು, ಕಾಯಿ, ಹಣ್ಣು ಕೊಡುತ್ತದೆ. ಹಸುವಿಗೆ ಅಥವಾ ಎಮ್ಮೆಗೆ ನೀರು, ಮೇವು ಸರಿಯಾಗಿ ಕೊಟ್ಟರೆ ಮಾತ್ರ ಅವು ಹಾಲನ್ನು ಕೊಡುತ್ತವೆ.

ಅಲ್ಪ-ಸ್ವಲ್ಪ ನೀರು, ಮೇವು ಕೊಟ್ಟು ಬಹಳಷ್ಟು ಕೊಟ್ಟೆ ಎಂದು ಹೇಳಿ ನಾವು ಜನರಿಗೆ ಮೋಸ ಮಾಡಬಹುದು. ಆದರೆ ಆ ಪ್ರಾಣಿಗಳು ಮಾತ್ರ ನಾವು ಕೊಟ್ಟ ಆಹಾರಕ್ಕೆ ತಕ್ಕಂತೆ ಹಾಲು ಕೊಡುತ್ತವೆ ವಿನಾ ಅದರಲ್ಲಿ ಹೆಚ್ಚು ಕಡಿಮೆ ಎಂದೂ ಮಾಡುವುದಿಲ್ಲ. ಆ ಮೂಕ ಮುಗ್ಧ ಪಶುಗಳಲ್ಲಿರುವ ಪ್ರಾಮಾಣಿಕತೆ, ಸತ್ಯಾಚರಣೆ ಮನುಷ್ಯರಲ್ಲಿ ಇಲ್ಲದಿದ್ದರೆ ಹೇಗೆ? ಈ ನೆಲ, ಜಲ, ಗಾಳಿ, ಬೆಳಕು, ಪಶು-ಪಕ್ಷಿ, ಗಿಡ-ಮರ, ಸಮಸ್ತ ಸೃಷ್ಟಿಯ ಸನ್ಮಾರ್ಗದಲ್ಲಿ ನಡೆದಿದೆ ಎಂದೇ ನಾವು ಬದುಕಿದ್ದೇವೆ, ಇಲ್ಲದಿದ್ದರೆ ಆ ದೇವರೇ ಗತಿ!!

ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್।
ಸತ್ಯಮಪಿ ಅಪ್ರಿಯಂನ ಬ್ರೂಯಾತ್॥

ನಾವೆಲ್ಲರೂ ಸತ್ಯವನ್ನೇ ಹೇಳಬೇಕು. ಆದರೆ ಅದನ್ನು ಸವಿಯಾಗಿ ಹೇಳಬೇಕು. ಸತ್ಯವೇ ಆಗಿದ್ದರೂ ಸವಿಯಾಗಿರದಿದ್ದರೆ, ಕಹಿಯಾಗಿದ್ದರೆ ಹೇಳಬಾರದು. ಸತ್ಯವನ್ನೇ ಹೇಳುತ್ತೇವೆಂದು ನಮಗೆ ಗೊತ್ತಿರುವುದನ್ನೆಲ್ಲ ಹೇಳುತ್ತ ಹೋಗುವುದು ಸಮಂಜಸವಾಗಲಾರದು. 'ಸತ್ಯಾನ್ನಾಸ್ತಿ ಪರೋಧರ್ಮಃ' ಸತ್ಯಕ್ಕಿಂತ ಶ್ರೇಷ್ಠವಾದ ಧರ್ಮವೇ ಇನ್ನೊಂದಿಲ್ಲಾ. 'ಸತ್ಯೇ ಸರ್ವಂ ಪ್ರತಿಷ್ಠಿತಂ' ಸತ್ಯದ ಮೇಲೆಯೇ ಎಲ್ಲವೂ ನಿಂತಿದೆ. ಆದುದರಿಂದ ನಾವೂ ಸತ್ಯವನ್ನೇ ಗೌರವಿಸಬೇಕು, ನುಡಿಯಬೇಕು, ನಡೆಯಬೇಕು. ನಮ್ಮ ತನು, ಮನ, ಬುದ್ಧಿ, ಭಾವ ಸರ್ವಾಂಗಗಳಲ್ಲಿ ಸತ್ಯವೇ ತುಂಬಿಕೊಳ್ಳಬೇಕು. ಅದು ಸತ್ಯಾಚರಣೆ.

## ನೂತನ ನಿಬಂಧಕರು



ಸಹಕಾರಿಗಳ ನೂತನ ನಿಬಂಧಕರಾಗಿ **ಶ್ರೀ ಎಂ.ಕೆ. ಅಯ್ಯಪ್ಪ** ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

## ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ ಆಯ್ಕೆ



**ಶ್ರೀ ಡಿ.ಟಿ.ಪಾಟೀಲ**
ಅಧ್ಯಕ್ಷರು

**ಶ್ರೀ ಬಿ.ಎಸ್. ಪರಮಶಿವಯ್ಯ**
ಉಪಾಧ್ಯಕ್ಷರು



## ರಾಷ್ಟ್ರೀಯ ಸಹಕಾರಿ ವಸತಿ ಮಹಾಮಂಡಳದ ನೂತನ ಉಪಾಧ್ಯಕ್ಷರಾಗಿ ಆಯ್ಕೆ

ರಾಷ್ಟ್ರೀಯ ಸಹಕಾರಿ ವಸತಿ ಮಹಾಮಂಡಳದ ಉಪಾಧ್ಯಕ್ಷರಾಗಿ ಶಾಸಕರು, ರಾಜ್ಯ ಸಹಕಾರಿ ವಸತಿ ಮಹಾಮಂಡಳದ ಅಧ್ಯಕ್ಷರಾದ **ಶ್ರೀ ಎಸ್.ಟಿ. ಸೋಮಶೇಖರ್** ಅವರು ಆಯ್ಕೆಯಾಗಿದ್ದಾರೆ.



## ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟಕ್ಕೆ ಆಯ್ಕೆ



**ಶ್ರೀ ಮಂಜುನಾಥ್ ಎಸ್.ಕೆ.**
ಅಧ್ಯಕ್ಷರು



**ಶ್ರೀ ಬಿ. ಮಧುಸೂಧನ ನಾಯಕ್**
ಉಪಾಧ್ಯಕ್ಷರು



# ಹಿಂದುಸ್ತಾನವು ಎಂದೂ ಮರೆಯದ ಭಾರತರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರಿಗೆ ಸೌಹಾರ್ದ ಸಹಕಾರಿಗಳ ಭಾವಪೂರ್ಣ ಶ್ರದ್ಧಾಂಜಲಿ

*If you salute your duty*
*You no need to salute anybody*
*If you pollute your duty*
*You have to salute everybody*
*- Dr. Kalam*

ಭಾರತದ ಮಾಜಿ ರಾಷ್ಟ್ರಪತಿ, ಭಾರತರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು ದಿನಾಂಕ 27-7-2015 ರಂದು ಹೃದಯಾಘಾತದಿಂದ ನಿಧನರಾದದು ದೇಶಕ್ಕೆ ತುಂಬಲಾರದ ನಷ್ಟ. ಶ್ರೀಯುತರನ್ನು ಕಳೆದುಕೊಂಡು ದೇಶ ಬಡವಾಗಿದೆ. ಯುವಕರ ಆಶಾಕಿರಣ, ದೇಶದ ಭವಿಷ್ಯದ ದೃಷ್ಟಾರ, ಮಹಾಮಾನವತಾವಾದಿ, ವಿಶ್ವಮಾನ್ಯತೆಯ ಗೌರವದ ಕಿರೀಟವನ್ನೇ ಪಡೆದುಕೊಂಡಿದ್ದ ಮಹಾನ್ ವ್ಯಕ್ತಿತ್ವ ಡಾ.ಕಲಾಂರವರದು. ಡಾ.ಕಲಾಂರವರ ನಿಧನಕ್ಕೆ ಮಿಡಿಯದ ಹೃದಯಗಳಿಲ್ಲ. ಅಶ್ರುತರ್ಪಣ ಸಲ್ಲಿಸದ ಕಣ್ಣುಗಳಿಲ್ಲ. ದೇಶದ ಎಲ್ಲ ವರ್ಗದ ಜನರ ಪ್ರೀತಿ ಪಾತ್ರರಾಗಿದ್ದ ಸದಾ ಹಸನ್ಮುಖಿ. ಸದಾ ಕ್ರಿಯಾಶೀಲ, ದೇಶದ ಭವಿಷ್ಯದ ಬಗ್ಗೆ ನಿರಂತರ ಚಿಂತನೆಗಳನ್ನು ರೂಢಿಸಿಕೊಂಡಿದ್ದ, ಯುವಕರ ಬಗ್ಗೆ ಯಾವಾಗಲೂ ಕಾಳಜಿ ಹೊಂದಿದ್ದ ಡಾ.ಕಲಾಂರವರು ನೀಡುತ್ತಿದ್ದ ಸಂದೇಶಗಳಿಂದ ದೇಶದ ಎಲ್ಲ ಗಣ್ಯಮಾನ್ಯರ ಗೌರವಕ್ಕೆ, ಹೊಗಳಿಕೆಗೆ ಪಾತ್ರರಾದವರು, ಭಾರತದ ಏಕೈಕ ರಾಷ್ಟ್ರಪತಿ ಇಷ್ಟೆಲ್ಲ ಉನ್ನತಮಟ್ಟದ ಗೌರವಕ್ಕೆ ಪಾತ್ರರಾದವರು.

ತಮಿಳುನಾಡಿನ ರಾಮೇಶ್ವರದ ಒಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿ, ಇಂಜಿನಿಯರಿಂಗ್ ಪದವಿ ಪಡೆದು, ವಿಜ್ಞಾನಿಯಾಗಿ ಮಿಸೆಲ್‌ಗಳ ನಿರ್ಮಾಣ, ಉಪಗ್ರಹ ಉಡಾವಣೆಯಲ್ಲಿ ಅವರು ಸಲ್ಲಿಸಿದ ಸೇವೆ, ಅವರ ಜನಾನುರಾಗದ ಬಹುಮುಖ ಪ್ರತಿಭೆಯ ವ್ಯಕ್ತಿತ್ವ, ಶ್ರೀಯುತರನ್ನು ದೇಶದ ವಿಜ್ಞಾನ ಲೋಕದ ಧ್ರುವತಾರೆಯನ್ನಾಗಿಸಿತು. ಭಾರತದ 11ನೇ ರಾಷ್ಟ್ರಪತಿಯಾಗಿ 5 ವರ್ಷಗಳು ಡಾ. ಕಲಾಂರವರಿಗೆ ಉನ್ನತ ಸ್ಥಾನದ ಗೌರವ ದೊರಕುವಂತಾಯಿತು. ದೇಶದ ಪ್ರತಿಯೊಬ್ಬ ಸಾಮಾನ್ಯರ ಹೃದಯದಲ್ಲಿ ಸ್ಥಾನ ಪಡೆಯುವಂತಾಯಿತು.

ಶ್ರೀಯುತರು 2005ರಲ್ಲಿ ಸ್ವಿಟ್ಜರ್‌ಲೆಂಡ್‌ಗೆ ಭೇಟಿ ನೀಡಿದಾಗ 26 ಮೇ ದಿನವನ್ನು ವಿಜ್ಞಾನ ದಿನವನ್ನಾಗಿ ಆಚರಿಸಿ, ಶ್ರೀಯುತರಿಗೆ ಗೌರವ ನೀಡಲಾಯಿತು. 2010ರಲ್ಲಿ ವಿಶ್ವಸಂಸ್ಥೆಯವರು ಶ್ರೀಯುತರ ಗೌರವಾರ್ಥ ಅಕ್ಟೋಬರ್ 15ನೇ ದಿನವನ್ನು ವಿಶ್ವ ವಿದ್ಯಾರ್ಥಿಗಳ ದಿನವನ್ನಾಗಿ ಆಚರಿಸಲು ಕರೆಕೊಟ್ಟಿರುವುದು ಭಾರತಕ್ಕೆ ಸಂದ ಗೌರವ. ಡಾ.ಕಲಾಂರವರನ್ನು ಭೇಟಿಯಾದ ಪ್ರತಿಯೊಬ್ಬರಿಗೂ ಅವರ ವ್ಯಕ್ತಿತ್ವದ ಬಗ್ಗೆ, ಅವರ ಜೀವನ ಶೈಲಿಯ ಬಗ್ಗೆ, ಅವರ ವಿಚಾರ ಧಾರೆಯ ಬಗ್ಗೆ ಅನಿಸಿಕೆಗಳು ಅಪಾರ. ಡಾ. ಕಲಾಂರವರ ಭವ್ಯ ಭಾರತದ ಕನಸನ್ನು ನನಸಾಗಿಸಲು ಪ್ರಯತ್ನಿಸೋಣ. ಡಾ.ಕಲಾಂರವರಿಗೆ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಭಾವಪೂರ್ಣ ಶ್ರದ್ಧಾಂಜಲಿ

(ಸಂಗ್ರಹ : ಶ್ರೀ ರಾಜೇಂದ್ರರಾವ್ ಶಿಂಧೆ)

## ಡಾ.ಕಲಾಂರವರಿಗೆ ಲಭಿಸಿರುವ ಪ್ರಶಸ್ತಿಗಳು

1981 ಪದ್ಮ ಭೂಷಣ, 1990 ಪದ್ಮ ವಿಭೂಷಣ, 1994 ಗೌರವಾನ್ವಿತ ಫೆಲೋಶಿಪ್, 1997 ಭಾರತ ರತ್ನ, 1997 ಇಂದಿರಾಗಾಂಧಿ ನ್ಯಾಷನಲ್ ಇಂಟಿಗ್ರೇಶನ್ ಅವಾರ್ಡ್, 1998 ವೀರ ಸಾವರ್ಕರ್ ಪ್ರಶಸ್ತಿ, 2000 ರಾಮಾನುಜ ಪ್ರಶಸ್ತಿ, 2007 ವಿಜ್ಞಾನ ಕ್ಷೇತ್ರದಲ್ಲಿ ಗೌರವ ಡಾಕ್ಟರೇಟ್, 2007 ಕಿಂಗ್‌ಚಾರ್ಲೆಸ್ II ಮೆಡಲ್, 2008 ಗೌರವ ಡಾಕ್ಟರ್ ಆಫ್ ಇಂಜಿನಿಯರಿಂಗ್, 2009 ಅಂತರರಾಷ್ಟ್ರೀಯ ವಾನ್ ಕರ್ಮಾನ್ ವಿಂಗ್ಸ್ ಅವಾರ್ಡ್, 2009 ಹೂವರ ಅವಾರ್ಡ್, 2009 ಗೌರವ ಡಾಕ್ಟರೇಟ್, 2010 ಗೌರವ ಡಾಕ್ಟರೇಟ್ ಆಫ್ ಇಂಜಿನಿಯರಿಂಗ್, 2011 LEEEಗೌರವ ಸದಸ್ಯತ್ವ, 2012 ಗೌರವ ಡಾಕ್ಟರೇಟ್ ಆಫ್ ಲಾಸ, 2014 ಗೌರವ ಡಾಕ್ಟರೇಟ್ ಆಫ್ ಸೈನ್ಸ್ ಇತ್ಯಾದಿ...



## ಸೌಹಾರ್ದ ಸಹಕಾರಿಗಳ ಹಾಗೂ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಕೇಂದ್ರ ಸಚಿವರ ಭೇಟಿ ಹಾಗೂ ಮನವಿ ಸಲ್ಲಿಕೆ





ಕೇಂದ್ರ ಹಣಕಾಸು ಸಚಿವರಿಗೆ ನಿಯೋಗದ ಭೇಟಿ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಶಿರಸಿ ತೋಟಗಾರ್ಸ್ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಶಾಂತರಾಮ ಹೆಗಡೆ, ಸಾಗರದ ಸುವಿಧಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ವಿ.ರವೀಂದ್ರನಾಥ್, ಶಿವಮೊಗ್ಗ ಮಾಮ್ಕೋಸ ಉಪಾಧ್ಯಕ್ಷರಾದ ಶ್ರೀ ಯಡಗೆರೆ ಸುಬ್ರಮಣ್ಯ ಮುಂತಾದವರು.





ನಿಯೋಗದಿಂದ ಕೇಂದ್ರ ವಾಣಿಜ್ಯ ಹಾಗೂ ಉದ್ದಿಮೆ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಹಾಗೂ ಕೇಂದ್ರ ಕೃಷಿ ಸಚಿವ ಶ್ರೀ ರಾಧಾಮೋಹನ್ ಸಿಂಗ್‌ರವರ ಭೇಟಿ ಹಾಗೂ ಮನವಿ ಪತ್ರ ಸಲ್ಲಿಕೆ.

## ಹಣಕಾಸು ನಿರ್ವಹಣೆ ತರಬೇತಿ ಕಾರ್ಯಾಗಾರ ಹಾಗೂ ನಗರ ಯಶಸ್ವಿನಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನೇತೃತ್ವದಲ್ಲಿ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಹಣಕಾಸು ನಿರ್ವಹಣೆ ತರಬೇತಿ ಕಾರ್ಯಾಗಾರ ಹಾಗೂ ನಗರ ಯಶಸ್ವಿನಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯನ್ನು ದಿನಾಂಕ 16 ಜುಲೈ 2015 ರಂದು, ಹೋಟೆಲ್ ಪಾರಿಜಾತ ಗೇಟ್ ವೇ ಇಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಾಗಾರದ ಉದ್ಘಾಟನೆಯನ್ನು ಶ್ರೀಮತಿ ಕಾವ್ಯಶ್ರೀರವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ಪ್ರಾಸ್ತಾವಿಕವಾಗಿ ಮಾತನಾಡಿದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸಂಯುಕ್ತ ಸಹಕಾರಿಯಿಂದ ನಿರಂತರವಾದ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗುತ್ತಿದ್ದು,



ಸೌಹಾರ್ದ ಸಹಕಾರಿಗಳು ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಂಡು ಪ್ರಯೋಜನ ಪಡೆದುಕೊಳ್ಳಬೇಕು. ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಹಾಗೂ ಏಳಿಗೆಗಾಗಿ ಸಂಯುಕ್ತ ಸಹಕಾರಿಯು ಬೆಂಗಳೂರು ವಿಭಾಗಕ್ಕೆ ಪ್ರತ್ಯೇಕವಾಗಿ ವಿಭಾಗೀಯ ಕಛೇರಿಯನ್ನು ಪ್ರಾರಂಭಿಸಲಾಗಿದ್ದು, ವಿಭಾಗೀಯ ಅಧಿಕಾರಿಗಳಾಗಿ

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ISO 9001:2008 ಪ್ರಮಾಣಪತ್ರ




ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಅಂತರರಾಷ್ಟ್ರೀಯ ಗುಣಮಟ್ಟ ನಿರ್ವಹಣೆ ಸಂಸ್ಥೆಯವರು ISO 9001:2008 ಪ್ರಮಾಣಪತ್ರವನ್ನು ನೀಡಿರುತ್ತಾರೆ. ಸಂಯುಕ್ತ ಸಹಕಾರಿಯ ಕಾರ್ಯಾಚರಣೆಯನ್ನು ಅಧ್ಯಯನ ಮಾಡಿದ ಈ ಸಂಸ್ಥೆ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಗುಣಮಟ್ಟವನ್ನು ಶ್ಲಾಘಿಸಿದ್ದಾರೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹೆಮ್ಮೆಪಡುವ ವಿಷಯವಾಗಿದೆ. ಮುಂಬರುವ ದಿನಗಳಲ್ಲಿ ಈ ಗುಣಮಟ್ಟವನ್ನು ಕಾಯ್ದುಕೊಳ್ಳುವ ಹಾಗೂ ಇನ್ನೂ ಹೆಚ್ಚಿಸಿಕೊಳ್ಳುವ ಗುರುತರ ಜವಾಬ್ದಾರಿಯಾಗಿದೆ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಮತ್ತು ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಸಹಕಾರ ಕೋರಿದ್ದಾರೆ.

## ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೋರಂಗಾವ ಸಹಕಾರಿಯ ಬೇಡಕಿಹಾಳ ಶಾಖೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ ಉದ್ಘಾಟನೆ.






ಶ್ರೀಮತಿ ಕೃತಿ ಜನಾರ್ಧನ್‌ರವರು ಕಾರ್ಯನಿರ್ವಹಿಸುತ್ತಿದ್ದಾರೆ. ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಬೆಂಗಳೂರು ನಗರದ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ.ನಾಗರತ್ನರವರು ನಗರ ಯಶಸ್ವಿನಿ ಯೋಜನೆಯು ಸಹಕಾರಿಗಳಿಗೆ ಬಹಳ ಅವಶ್ಯಕವಾಗಿದೆ ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿರ್ದೇಶಕರಾದ ಶ್ರೀ ಎನ್. ರಮೇಶ್‌ರವರು ಮಾತನಾಡಿ, ಪ್ರತಿ ಸೌಹಾರ್ದ ಸಹಕಾರಿಗಳು ತರಬೇತಿ, ಸಮಾಲೋಚನಾಸಭೆ ಹಾಗೂ ಕಾರ್ಯಾಗಾರಗಳಲ್ಲಿ ಭಾಗವಹಿಸಿ, ಇದರ ಪ್ರಯೋಜನ ಪಡೆದುಕೊಳ್ಳುವಂತೆ ತಿಳಿಸಿದರು.

ಸ್ವಾಗತವನ್ನು ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್, ಶ್ರೀಮತಿ ಕೃತಿ ಜನಾರ್ಧನ್, ಬೆಂಗಳೂರು ವಿಭಾಗೀಯ ಅಧಿಕಾರಿ ಇವರು ವಂದಿಸಿದರು. ನಬಾರ್ಡ್‌ನ ನಿವೃತ್ತ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಸಂಪತ್ ಕುಮಾರ್‌ರವರು "ಸೌಹಾರ್ದ ಸಹಕಾರಿಗಳಲ್ಲಿ ಹಣಕಾಸು ನಿರ್ವಹಣೆ" ಎಂಬ ವಿಷಯದ ಕುರಿತು ಕಾರ್ಯಾಗಾರ ನಡೆಸಿಕೊಟ್ಟರು.

**ಪ್ರಗತಿಪರಿಶೀಲನಾ ಸಭೆ :** ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ನಗರ ಯಶಸ್ವಿನಿ ಯೋಜನೆಯ ಪ್ರಗತಿ ಪರಿಶೀಲನೆ ಸಭೆ ನಡೆಸಲಾಯಿತು.

ಈ ಪ್ರಗತಿ ಪರಿಶೀಲನಾ ಸಭೆಯಲ್ಲಿ ಬೆಂಗಳೂರು ಕೇಂದ್ರ ವಲಯದ ಉಪನಿಬಂಧಕರಾದ ಶ್ರೀ ಅಶ್ವಥ್ ನಾರಾಯಣ, ಉತ್ತರ ವಲಯದ ಉಪನಿಬಂಧಕರಾದ ಶ್ರೀ ಪ್ರಸಾದ್ ರೆಡ್ಡಿ, ಸಹಾಯಕ ನಿಬಂಧಕರಾದ ಶ್ರೀ ದೊಡ್ಡತಮ್ಮೇಗೌಡ, ಶ್ರೀ ಬಸವರಾಜಪ್ಪನವರು, ಯಶಸ್ವಿನಿ ಟ್ರಸ್ಟ್‌ನ ಅಧಿಕಾರಿಗಳಾದ ಶ್ರೀ ವೆಂಕೊಬರಾವ, ನಿರೀಕ್ಷಕರಾದ ಶ್ರೀ ಸಂಪತ್ ಕುಮಾರ್, ಶ್ರೀಮತಿ ಚೇತನಾ, ಶ್ರೀಮತಿ ವಿನೂತನಾ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಹಾಗೂ ಸೌಹಾರ್ದ ಸಹಾಕಾರಿಗಳ ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರು.

**ಸಮಾಲೋಚನಾ ಸಭೆ :** ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಭೆಯಲ್ಲಿ ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳೊಂದಿಗೆ ಮಾತನಾಡಿ, ಸಹಕಾರಿಯ ಶಾಸನಾತ್ಮಕ ಕಾರ್ಯಗಳಾದ ಲೆಕ್ಕ ಪರಿಶೋಧನೆ, ವಾರ್ಷಿಕ ಮಹಾಸಭೆ ಜರುಗಿಸುವುದು ಮುಂತಾದ ಕಾನೂನು ವಿಷಯಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಉಪಸ್ಥಿತರಿದ್ದ ಸಂಯುಕ್ತ ಸಹಕಾರಿಯ ಉತ್ತರ ಕನ್ನಡ ಜಿಲ್ಲಾ ನಿರ್ದೇಶಕರಾದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿಯವರು ದ್ರವ್ಯಾಸ್ತಿ ನಿರ್ವಹಣೆಯ ಮಹತ್ವದ ಕುರಿತು ವಿವರಿಸಿದರು. ಈ ಕಾರ್ಯಾಗಾರದಲ್ಲಿ 43 ಸೌಹಾರ್ದ ಸಹಕಾರಿಗಳಿಂದ 65 ಪ್ರತಿನಿಧಿಗಳು ಭಾಗವಹಿಸಿದರು.

# ಸೌಹಾರ್ದ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗೆ ಮೂಲ ಮಾಹಿತಿ ತರಬೇತಿ ಕಾರ್ಯಕ್ರಮ



ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಪ್ತಿಯ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ದಿನಾಂಕ 20-7-2015 ರಿಂದ 26-7-2015ರವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ ನಡೆದ 2ನೇ ತಂಡದ ಮೂಲ ಮಾಹಿತಿ ತರಬೇತಿ ಕಾರ್ಯಕ್ರಮವನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಉಪಪ್ರಧಾನ ವ್ಯವಸ್ಥಾಪಕ ಶ್ರೀ ಸುಭೋದಕುಮಾರ್ ಉದ್ಘಾಟಿಸಿದರು.

## ಬಹುಮುಖ ಬ್ಯಾಂಕಿಂಗ್ ಚಟುವಟಿಕೆಗಳಿಗೆ ಸೂಕ್ತ ಜ್ಞಾನ ಅಗತ್ಯ - ಶ್ರೀ ಸುಭೋದಕುಮಾರ್



ಕಾರ್ಯಕ್ರಮವನ್ನು ಉದ್ಘಾಟಿಸಿದ ಭಾರತೀಯ ರಿಸರ್ವ್ ಬ್ಯಾಂಕಿನ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಉಪಪ್ರಧಾನ ವ್ಯವಸ್ಥಾಪಕ ಶ್ರೀ ಸುಭೋದಕುಮಾರ್‌ರವರು ಮಾತನಾಡಿ ಆಧುನಿಕ ತಂತ್ರಜ್ಞಾನದಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಲೇ ಇವೆ. ಬ್ಯಾಂಕಿಂಗ್ ಚಟುವಟಿಕೆಗಳು ಬಹುಮುಖವಾಗಿ ಬೆಳೆಯುತ್ತಿರುವುದರಿಂದ ಬ್ಯಾಂಕಿಂಗ್ ಕ್ಷೇತ್ರದ ಬಗ್ಗೆ ಜ್ಞಾನವನ್ನು ಹೊಂದಿ ಕಾರ್ಯನಿರ್ವಹಿಸುವುದು ಹಾಗೂ ಆಗಿಂದಾಗ್ಗೆ ಜ್ಞಾನವನ್ನು ನವೀಕರಿಸುವುದು ಇಂದಿನ ಅಗತ್ಯತೆಯಾಗಿದೆ ಎಂದು ತಿಳಿಸಿ ದೇಶದ ಅರ್ಥವ್ಯವಸ್ಥೆಯಲ್ಲಿ ಬ್ಯಾಂಕುಗಳ ಪಾತ್ರ ಮಹತ್ವದ್ದು, ಇವುಗಳ ನಿಯಂತ್ರಣ ಕಾರ್ಯ ರಿಸರ್ವ್ ಬ್ಯಾಂಕಿಗೆ ವಹಿಸಲಾಗಿದೆ ಎಂದು ತಿಳಿಸಿ, ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಚಟುವಟಿಕೆಗಳ ಬಗ್ಗೆ ವಿವರ ನೀಡಿದರು.

## ಜ್ಞಾನಾರ್ಜನೆ ಹಾಗೂ ಕೌಶಲ್ಯ ಅಭಿವೃದ್ಧಿಗಾಗಿ ತರಬೇತಿ – ಶ್ರೀ ಗುರುನಾಥ ಜಾಂತಿಕರ



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗಾಗಿ ಸಂಯುಕ್ತ ಸಹಕಾರಿಯು ರಾಜ್ಯಾದ್ಯಂತ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುತ್ತ ಬಂದಿದೆ. ಕಳೆದ ವರ್ಷದಿಂದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ತರಬೇತಿಯನ್ನು ಆಯೋಜಿಸುತ್ತಿದೆ. ಇದು 2ನೇ ತಂಡದ ತರಬೇತಿ. ಶಿಬಿರಾರ್ಥಿಗಳಿಗೆ ಬ್ಯಾಂಕಿಂಗ್ ಕ್ಷೇತ್ರದ ಬಗ್ಗೆ ಜ್ಞಾನ ಕೊಡುವುದರ ಜೊತೆಗೆ ಅವರಲ್ಲಿ ಕೌಶಲ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಹಲವಾರು ಪರಿಣಿತರಿಂದ ಉಪನ್ಯಾಸ ಹಾಗೂ ಪ್ರಾಯೋಗಿಕಗಳನ್ನು ಏರ್ಪಡಿಸಿದೆ.

ಕಳೆದ ಬಾರಿ ಈ ತರಬೇತಿ ಉತ್ತಮವಾಗಿ ಮೂಡಿಬಂದಿದೆ ಎಂದು ಅಭಿಪ್ರಾಯಪಡಲಾಗಿತ್ತು. ಈ ಬಾರಿಯೂ ಸಹ ಅದೇ ರೀತಿ ಉತ್ತಮ ರೀತಿಯಲ್ಲಿ ವ್ಯವಸ್ಥೆಗಳನ್ನು ಏರ್ಪಡಿಸಲಾಗಿದೆ. ತರಬೇತಿಯ ಪೂರ್ಣ ಪ್ರಯೋಜನ ಪಡೆದು ಬ್ಯಾಂಕಿಗೆ ಆಸ್ತಿಯಾಗಿ ಹೊರಹೊಮ್ಮಬೇಕೆಂದು ಶಿಬಿರಾರ್ಥಿಗಳಿಗೆ ಸಂದೇಶ ನೀಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್.ಎನ್.ದೇಶಪಾಂಡೆ, ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ವಸಂತ ನಾಯಕ, ಪ್ರಾಧ್ಯಾಪಕರಾದ ಡಾ.ಕಿಶೋರರವರು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ. ಕುಮಾರ್‌ರವರು ಸ್ವಾಗತ ಮಾಡಿದರು. ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನರವರು ವಂದನೆ ಸಲ್ಲಿಸಿದರು.



# ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿಷಯಗಳು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳ ಪಾತ್ರ ಕುರಿತು ಸಂವಾದ ಕಾರ್ಯಕ್ರಮ

ದಿನಾಂಕ : 26-7-2015 ರಂದು ಏರ್ಪಡಿಸಿದ್ದ ಈ ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ರಿಸರ್ವ್ ಬ್ಯಾಂಕಿನ ಸಹಪ್ರಧಾನ ವ್ಯವಸ್ಥಾಪಕಿ ಶ್ರೀಮತಿ ಸತ್ಯವಾಣಿ ಇವರು ರಿಸರ್ವ್ ಬ್ಯಾಂಕಿನ ಧ್ಯೇಯ ಧೋರಣೆಗಳು ಮತ್ತು ಸೌಹಾರ್ದ ಸಹಕಾರಿ ಬ್ಯಾಂಕುಗಳ ನಿರ್ವಹಣೆಯ ಬಗ್ಗೆ ತಿಳಿಸಿದರು. ಸುಕೋ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿ, ವಿಕಾಸ ಬ್ಯಾಂಕ್ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠ ಇವರುಗಳು ಸೌಹಾರ್ದ ಸಹಕಾರಿ ಬ್ಯಾಂಕುಗಳ ಪ್ರಗತಿ ಹಾಗೂ ಕಾರ್ಯಚಟುವಟಿಕೆಗಳ ಅವಕಾಶಗಳ ಬಗ್ಗೆ ತಿಳಿಸಿದರು. ನಬಾರ್ಡ್‌ನ ನಿವೃತ್ತ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ವಿ.ಗುಂಡೂರಾವ್‌ರವರು ಸೌಹಾರ್ದ ಸಹಕಾರಿ ಬ್ಯಾಂಕುಗಳಲ್ಲಿ ತಾಂತ್ರಿಕತೆಯ ಅಳವಡಿಸುವಿಕೆಯಿಂದ ಕಾರ್ಯ ತ್ವರಿತವಾಗಿ ಹಾಗೂ ಅಚ್ಚುಕಟ್ಟಾಗಿ ನಿರ್ವಹಿಸಲು ಸಾಧ್ಯ ಎಂದು ತಿಳಿಸಿದರು. ಮಹಿಳಾ ಸಹಕಾರ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕಿ ಶ್ರೀಮತಿ ಗಾಯತ್ರಿ ಶ್ರೀಹರ್ಷರವರು ಪಟ್ಟಣ ಸಹಕಾರ ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳು ಸವಾಲುಗಳು ಹಾಗೂ ಅವುಗಳಿಗೆ ಪರಿಹಾರಗಳ ಬಗ್ಗೆ ತಿಳಿಸಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿದರು.

ಸಂವಾದಕಾರರಾಗಿ ಕರ್ನಾಟಕ ಇನ್ಸ್‌ಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಪ್ರಾಂಶುಪಾಲರಾದ ಶ್ರೀ ಎನ್. ಎಮ್.ಶಿವಕುಮಾರವರು ಕಾರ್ಯನಿರ್ವಹಿಸಿದರು.

7 ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಈ ರೀತಿಯ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿ, ಜ್ಞಾನವನ್ನು ಹೆಚ್ಚಿಸುವ ಕಾರ್ಯ ಅತ್ಯಂತ ಪರಿಣಾಮಕಾರಿಯಾಗಿದೆ ಎಂದು ಶಿಬಿರಾರ್ಥಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

# ಸೌಹಾರ್ದ ಸಹಕಾರಿಗಳು ಎಸಿಸಿ ಕೇಂದ್ರವನ್ನು (ಇ-ಸ್ಟಾಂಪಿಂಗ್) ಪ್ರಾರಂಭಿಸುವ ಸಮಯದಲ್ಲಿ ಗಮನಿಸಬೇಕಾದ ಮಾನದಂಡಗಳು

1. ಯಾವುದೇ ಸಹಕಾರಿಗೆ ಇ-ಸ್ಟ್ಯಾಂಪಿಂಗ್ ಕೇಂದ್ರಕ್ಕೆ ಅನುಮತಿ ನೀಡಲು ಸದರಿ ಸಹಕಾರಿಯು ಪ್ರಾರಂಭವಾಗಿ ಕನಿಷ್ಠ 3 ವರ್ಷಗಳಾಗಿರತಕ್ಕದ್ದು.
2. ಪ್ರಸ್ತುತ ವರ್ಷದಲ್ಲಿ ಎಲ್ಲಾ ಸಂಚಿತ ನಷ್ಟಗಳನ್ನು ಕಳೆದು ಲಾಭದಲ್ಲಿ ಕಾರ್ಯನಿರ್ವಹಿಸುತ್ತಿರತಕ್ಕದ್ದು.
3. ಸಹಕಾರಿಯ ಎಲ್ಲಾ 3 ವರ್ಷಗಳ ಲೆಕ್ಕಪರಿಶೋಧನಾ ವರದಿ, ಸಾಮಾನ್ಯ ಸಭೆ ನಡೆಸಿರುವ ಕುರಿತು ವರದಿ, ಕಾಯ್ದೆ ಕಲಂ 34ರಡಿಯ ವಿದ್ಯುಕ್ತ ವರದಿ ಸಲ್ಲಿಕೆಯಾಗಿರತಕ್ಕದ್ದು ಹಾಗೂ ಶಿಕ್ಷಣ ನಿಧಿ ಮತ್ತು ವಾರ್ಷಿಕ ಶುಲ್ಕವು ಯಾವುದೇ ವರ್ಷ ಬಾಕಿ ಇರದಂತೆ ಪಾವತಿಯಾಗಿರತಕ್ಕದ್ದು.
4. ಒಂದು ಇ-ಸ್ಟ್ಯಾಂಪಿಂಗ್ ಕೇಂದ್ರದಿಂದ ಇನ್ನೊಂದು ಇ-ಸ್ಟ್ಯಾಂಪಿಂಗ್ ಕೇಂದ್ರಕ್ಕೆ ನಡುವಿನ ಅಂತರ ಕನಿಷ್ಠ 500 ಮೀಟರ್‌ಗಳಗಿರತಕ್ಕದ್ದು.
5. ಇ-ಸ್ಟ್ಯಾಂಪಿಂಗ್ ವ್ಯವಹಾರ ನಡೆಸಲು ಬೇಕಾದ ಅಗತ್ಯ ಆರ್ಥಿಕ ಸದೃಢತೆ ಹೊಂದಿರಬೇಕು.

   ಮೇಲಿನ ಮಾನದಂಡಗಳನ್ನು ಸಂಯುಕ್ತ ಸಹಕಾರಿಯು ಕೆಳಗೆ ಸೂಚಿಸಿರುವ ಸಮಯಗಳಲ್ಲಿ ಸಡಲೀಕರಿಸಲಾಗುವುದು.

- ಸ್ಟಾಕ್ ಹೋಲ್ಡಿಂಗ್‌ರವರು ಬೇಡಿಕೆ ಇದ್ದ ಸ್ಥಳವನ್ನು ತಿಳಿಸಿದರೆ.
- ರಾಜ್ಯದ ಯಾವ ಸ್ಥಳದಲ್ಲಿ (ತಾಲ್ಲೂಕುಗಳಲ್ಲಿ) ಇ-ಸ್ಟ್ಯಾಂಪಿಂಗ್ ಕೇಂದ್ರ ಇಲ್ಲದಿದ್ದರೆ.

# ಶಿಬಿರಾರ್ಥಿಗಳ ಅನಿಸಿಕೆಗಳು



- **Sri Venkatesh Kattimani, SUCO Bank.**
  Very good take off to fly high
- **ಶ್ರೀ ಭಾರತಿ ಪಿ.ಜಿ., ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ.**
  ಈ ತರಬೇತಿ ವಜ್ರದಂತೆ ಅಮೂಲ್ಯವಾದದ್ದು.
- **Lavanya V.K., Vikas Bank Ltd., Hospet.**
  A session where we can really learn and develop our skills regarding how to apply our skills and knowledge in bank and to provide an ultimate service to our customer.
- **Rupa M, Vikas Bank Ltd., Hospet.**
  Learnt many things about banking sector as well as my life. It just changed my life style in progressive way.
- **Shambhavi, SUCO Bank Ni., Bellary.**
  One of the extraordinary. ಒಂದು ಅತ್ಯುತ್ತಮವಾದ ಕಾರ್ಯಕ್ರಮವಾಗಿದ್ದು, ಇದರಿಂದ ನನಗೆ ಬಹಳ ಉಪಯೋಗ ವಾಗಿದ್ದು, ನನ್ನ ವ್ಯಕ್ತಿತ್ವ ವಿಕಸನಕ್ಕೆ ಕಾರಣವಾಗಿದೆ.
- **Sri Veeresh T, Vikas Bank Ltd., Hospet.**
  ಈ ಕಾರ್ಯಕ್ರಮ ಅದ್ಭುತವಾಗಿದ್ದು, ವಿಶಿಷ್ಟ, ವಿನೂತನ, ವಿಭಿನ್ನ, ವಿಶೇಷ, ವಿವೇಚನಾ ಭರಿತವಾಗಿತ್ತು.
- **Sri Nuthan.K.S, Vikas Bank Ltd.,**
  Single platform which made me to become a very efficient banker.
- **Y. Jayashree, Vikas Bank Ltd., Hospet.**
  This training built my confidence and efficiency, effectively.
- **ಶ್ರೀ ಈರಪ್ಪಾ ಶಂಕರ ಚೌಗಲಾ, ಬೆಲ್ಲದ ಬಾಗೇವಾಡಿ.**
  ಈ ತರಬೇತಿಯಿಂದ ಕೆಲಸ ಮಾಡುವ ಆತ್ಮವಿಶ್ವಾಸ ಹೆಚ್ಚಿದೆ.
- **Sri Siddaganga R, Vikas Souharda Co-operative Bank Ltd.,**
  The knowledge which we gain in this training was super, supreme, fantastic and mind blowing.
- **Sujatha R, Shushruthi Souharda Sahakara Bank Ni., Bangalore.**
  ಕತ್ತಲಲ್ಲಿ ಬ್ರಹ್ಮಕಮಲ ಅರಳಿರುವ ಸ್ಪರ್ಶ ಸುವಾಸನೆಯಿಂದ ತಿಳಿಯುವಂತೆ ಸಹಕಾರಿಯ ಅರಿವು ಮೂಡಿದೆ.
- **Sri Shashank.U.G, Sree Charan Souharda Co-operative Bank Ni., Bangalore.**
  About training what I can say is that; "it was the ocean of knowledge where we participants were the fish in it feeding on the knowledge and the trainers were the leader of group of fish guiding us in which direction should we feed on".
  In a single word what I can say is that it was "Simply Super Knowledgeable Training".

## ತರಬೇತಿ ಒಂದು ಮುನ್ನುಡಿಯಂತೆ : ಸಮಾರೋಪ ಕಾರ್ಯಕ್ರಮದಲ್ಲಿ ಮನೋಹರ ಮಸ್ಕಿ

ನಂತರ ನಡೆದ ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಮನೋಹರ ಮಸ್ಕಿಯವರು ಸಂಯುಕ್ತ ಸಹಕಾರಿಯವರು ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ಏರ್ಪಡಿಸುತ್ತಿರುವ ಬ್ಯಾಂಕಿಂಗ್ ಕ್ಷೇತ್ರದ ಮೂಲ ಮಾಹಿತಿ ತರಬೇತಿ ಅಧ್ಯಯನಕ್ಕೆ ಹಾಗೂ ಕಾರ್ಯನಿರ್ವಹಣೆಗೆ ಒಂದು ಮುನ್ನುಡಿಯಂತೆ.

ಯಾವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು? ಹೇಗೆ ಕಾರ್ಯ ನಿರ್ವಹಿಸಬೇಕು? ಕಾರ್ಯನಿರ್ವಹಿಸುವಾಗ ಏನೆಲ್ಲ ತಿಳಿದು ಕಾರ್ಯನಿರ್ವಹಿಸಬೇಕು? ಎಂಬುದು ಈ ತರಬೇತಿಯಿಂದ ತಿಳಿದುಕೊಳ್ಳಲು ಅವಕಾಶವಾಗಿದೆ.

ಇದೊಂದು ಉತ್ತಮ ತರಬೇತಿ ವ್ಯವಸ್ಥೆ, ಇದರ ಸದುಪಯೋಗಪಡಿಸಿಕೊಳ್ಳಿ ಎಂದು ತಿಳಿಸಿದರು.

## ವ್ಯಕ್ತಿತ್ವ ವಿಕಸನಕ್ಕೆ ಪೂರಕ – ವಿಶ್ವನಾಥ ಹಿರೇಮಠ

ಸಮಾರೋಪ ಭಾಷಣ ಮಾಡಿದ ವಿಕಾಸ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠರವರು ಇಂದಿನ ತಂತ್ರಜ್ಞಾನ ಹಾಗೂ ಪೈಪೋಟಿ ಯುಗದಲ್ಲಿ ತರಬೇತಿ ಇಲ್ಲದೇ ಕಾರ್ಯನಿರ್ವಹಿಸುವುದು ಕಷ್ಟಕರ. ಪ್ರತಿದಿನ ಪ್ರತಿಕ್ಷಣ ತಂತ್ರಜ್ಞಾನಗಳಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ನೋಡುತ್ತೇವೆ. ಹೀಗಾಗಿ ಕೇವಲ ಪದವೀಧರರಾಗಿ, ಉತ್ತಮ ಅಂಕಗಳನ್ನು ಪಡೆದು, ಕೆಲಸಕ್ಕೆ ಸೇರಿದರೆ ಕಾರ್ಯನಿರ್ವಹಿಸುವುದು ಸಾಧ್ಯವಿಲ್ಲ. ತರಬೇತಿಯಿಂದ ಮಾತ್ರ ಉತ್ತಮ ಕೆಲಸಗಳ ನಿರ್ವಹಣೆ ಸಾಧ್ಯ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ವರು ಸ್ವಾಗತ ಮಾಡಿದರು. ಶಿಬಿರದ ಸಂಚಾಲಕರಾದ ಶ್ರೀ ವಿ.ಜೆ.ಕಾರಕೂನರವರು ಶಿಬಿರದ ವರದಿಯನ್ನು ಪ್ರಸ್ತುತಪಡಿಸಿ, ಈ ತರಬೇತಿಯಲ್ಲಿ 7 ಸೌಹಾರ್ದ ಸಹಕಾರಿ ಬ್ಯಾಂಕುಗಳಿಂದ 47 ಪ್ರತಿನಿಧಿಗಳು ಹಾಗೂ ಸಂಯುಕ್ತ ಸಹಕಾರಿಯ ಇಬ್ಬರು ಅಧಿಕಾರಿಗಳು ಭಾಗವಹಿಸಿದ್ದರು.

ತರಬೇತಿ ಶಿಬಿರದ ಬಗ್ಗೆ ಹಲವಾರು ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ತಿಳಿಸಿದರು.

ತರಬೇತಿಯಲ್ಲಿ ಭಾಗವಹಿಸಿದ್ದ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಶ್ರೀ ಶಶಿಕುಮಾರರವರು ವಂದನಾರ್ಪಣೆ ಸಲ್ಲಿಸಿದರು. ಶ್ರೀ ವೈ.ವಿ. ಗುಂಡೂರಾವ್, ಶ್ರೀಮತಿ ಸತ್ಯವಾಣಿ, ಶ್ರೀಮತಿ ಗಾಯತ್ರಿ ಶ್ರೀಹರ್ಷ ಹಾಗೂ ಶ್ರೀ ಎನ್. ಎಮ್.ಶಿವಕುಮಾರವರು ಕಾರ್ಯ ಕ್ರಮದಲ್ಲಿ ಉಪಸ್ಥಿತರಿದ್ದರು.

**ಪ್ರಾಯೋಗಿಕಗಳು** : ಸಹಕಾರಿ ಬ್ಯಾಂಕುಗಳಲ್ಲಿ ವಿವಿಧ ರೀತಿಯ ಖಾತೆಗಳನ್ನು ತೆರೆಯುವಾಗ ಭರ್ತಿ ಮಾಡಲಾಗುವ ಫಾರ್ಮ್‌ಗಳು, ಅದರಂತೆ ಸಾಲಗಳನ್ನು ನೀಡುವಾಗ ಭರ್ತಿ ಮಾಡುವ ಫಾರ್ಮ್‌ಗಳು, ಅನುಸರಿಸಬೇಕಿರುವ ಕ್ರಮಗಳ ಬಗ್ಗೆ ಪ್ರಾಯೋಗಿಕಗಳನ್ನು ಏರ್ಪಡಿಸಲಾಗಿತ್ತು.

## ಪ್ರಥಮ ವಾರ್ಷಿಕ ಸಾಮಾನ್ಯ ಸಭೆ




ಕೌಶಲ್ಯ ನಿರ್ಮಾಣದಿಂದ ದೇಶದ ಏಳಿಗೆ ಸಾಧ್ಯ ಎಂಬ ಪ್ರಧಾನ ಮಂತ್ರಿಯವರ ಹೇಳಿಕೆಗೆ ಪೂರಕವಾಗಿ ಸಣ್ಣ ಪುಟ್ಟ ಕೈಗಾರಿಕೆಗಳಿಗೆ, ಕುಶಲಕರ್ಮಿಗಳಿಗೆ ಸಹಕಾರಿಯು ಸಾಲ ಸೌಲಭ್ಯ ಒದಗಿಸಲು ಸಿದ್ಧ ಎಂದು ಮಸ್ಕಿ ಪಟ್ಟಣದಲ್ಲಿ ನಡೆದ ಎಮ್–ಸಿಟಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಯ ಪ್ರಥಮ ಸಾಮಾನ್ಯ ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಅಶೋಕರೆಡ್ಡಿಯವರು ತಿಳಿಸಿದರು.

## 6ನೇ ಸರ್ವ ಸದಸ್ಯರ ಸಾಮಾನ್ಯ ಸಭೆ




ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಯಲಹಂಕ ಉಪನಗರ, ಬೆಂಗಳೂರು ಸಹಕಾರಿಯ 2014–15ನೇ ಸಾಲಿನ 6ನೇ ಸರ್ವ ಸದಸ್ಯರ ಸಾಮಾನ್ಯ ಸಭೆ ದಿನಾಂಕ 12.07.2015ರಂದು ಅಧ್ಯಕ್ಷರಾದ ಶ್ರೀ ಎಂ ಮುನಿರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. 976 ಸದಸ್ಯರು ಪಾಲ್ಗೊಂಡು, ಚರ್ಚಿಸಿ ನಂತರ ಸದಸ್ಯರಿಂದ ಸರ್ವಾನುಮತದ ತೀರ್ಮಾನಗಳನ್ನು ತೆಗೆದುಕೊಂಡು ದಾಖಲು ಮಾಡಲಾಯಿತು.

# ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರಿಂದ ರಾಜ್ಯದಾದ್ಯಂತ ಪ್ರವಾಸ ಹಾಗೂ ವಿವಿಧ ಸಹಕಾರಿಗಳಿಗೆ ಭೇಟಿ



ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೇಡಕಿಹಾಳ



ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಕ್ಕೇರಿ

ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು ರಾಜ್ಯದಾದ್ಯಂತ ಪ್ರವಾಸ ನಡೆಸಿ, ಸಂಪರ್ಕ ಸಭೆಗಳನ್ನು ನಡೆಸಿದರು ಹಾಗೂ ವಿವಿಧ ಸಹಕಾರಿಗಳಿಗೆ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷರು ಸೌಹಾರ್ದ ಇದ್ದರೆ ಸಂಸ್ಥೆಗಳು ಆರೋಗ್ಯ ಪೂರ್ಣವಾಗಿ ಬೆಳೆಯುತ್ತವೆ. ಸೌಹಾರ್ದ ಸಹಕಾರಿ ಬ್ಯಾಂಕುಗಳು ಬ್ಯಾಂಕೇತರ ವ್ಯವಹಾರ ನಡೆಸಿ ಆರ್ಥಿಕ ಲಾಭ ಗಳಿಸಬೇಕು. ಸೌಹಾರ್ದ ಸಹಕಾರಿ ಸಂಸ್ಥೆಗಳ ಕುಂದು-ಕೊರತೆಗಳ ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳು ಎದುರಿಸುತ್ತಿರುವ ತೊಂದರೆಗಳ ಕುರಿತು ತಿಳಿಸಿದರು. ಸೌಹಾರ್ದ ಸಹಕಾರಿ ಸಂಘಗಳ ಬೆಳವಣಿಗೆಗೆ ಎದುರಾಗುವ ಸಮಸ್ಯೆಗಳನ್ನು ನಿವಾರಿಸುವುದರ ಮೂಲಕ ಸಂಸ್ಥೆಗಳ ಅಭಿವೃದ್ಧಿಗೆ ತಾವು ಸದಾ ಸ್ಪಂದಿಸುತ್ತೇವೆ ಎಂದರು. ಸಹಕಾರಿ ರಂಗದಲ್ಲಿ ಬೆಳಗಾವಿ ಜಿಲ್ಲೆ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದು, ಜಿಲ್ಲೆಯ ಸೌಹಾರ್ದ ಸಹಕಾರಿ ಸಂಸ್ಥೆಗಳ ಕಾರ್ಯ ಶ್ಲಾಘನೀಯ ಎಂದರು.

**ಆದಾಯ ತೆರಿಗೆ ವಿನಾಯಿತಿಗೆ ಮನವಿ :** ಸೌಹಾರ್ದ ಸಹಕಾರಿ ಸಂಘಗಳ ಆದಾಯ ತೆರಿಗೆಗೆ ವಿನಾಯಿತಿ ನೀಡಬೇಕೆಂದು ಕೇಂದ್ರ ಸಚಿವರಾದ ಶ್ರೀ ಅರುಣ್ ಜೇಟ್ಲಿರವರನ್ನು ಭೇಟಿಯಾಗಿ ವಿನಂತಿಸಿಕೊಂಡಿದ್ದು, ಅವರು ಈ ವಿಷಯದ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತಿಳಿಸಿದರು. ಸೌಹಾರ್ದ ಸಂಸ್ಥೆಗಳ ಜೊತೆಗೆ ಸಂಸ್ಥೆಗಳಲ್ಲಿರುವ ಪಿಗ್ಮಿ ಏಜೆಂಟರ್ ಕಮೀಷನ್ ಮೇಲೆ ವಿಧಿಸಲಾಗುವ ಆದಾಯ ತೆರಿಗೆಗೆ ವಿನಾಯಿತಿ ನೀಡಬೇಕು ಎಂದು ಕೇಂದ್ರ ಆದಾಯ ತೆರಿಗೆ ಆಯುಕ್ತರಾದ ಶ್ರೀಮತಿ ಅನಿತಾ ಕಪೂರ ಅವರನ್ನು ಕೋರಲಾಗಿದ್ದು, ಅವರೂ ಸಹ ಈ ವಿಷಯದ ಬಗ್ಗೆ ಸೂಕ್ತ ಸ್ಪಂದನೆಯ ಭರವಸೆ ನೀಡಿದ್ದಾರೆ. ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ ರೂ.50 ಸಾವಿರಕ್ಕೂ ಹೆಚ್ಚು ಮೌಲ್ಯದ ಥರ್ಡ್ ಪಾರ್ಟಿ ಚೆಕ್ ಪಾವತಿಗೂ ಅನುಮತಿ ನೀಡುವಂತೆ ಆದಾಯ ತೆರಿಗೆ ಇಲಾಖೆಗೆ ಮನವಿ ಸಲ್ಲಿಸಲಾಗಿದ್ದು, ಮುಂಬರುವ ದಿನಗಳಲ್ಲಿ ಇದಕ್ಕೂ ಸಹ ಅನುಮತಿ ದೊರೆಯಲಿದೆ ಎಂದು ಅವರು ಮಾಹಿತಿ ನೀಡಿದರು.

**ಪ್ರತ್ಯೇಕ ನ್ಯಾಯಾಲಯ ಮಂಜೂರು :** ಸೌಹಾರ್ದ ಸಹಕಾರಿಗಳಿಗೆ ತಮ್ಮ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲು ಕರ್ನಾಟಕ ಸರಕಾರವು ಪ್ರತ್ಯೇಕ ನ್ಯಾಯಾಲಯವನ್ನು ಮಂಜೂರು ಮಾಡಿದೆ. ಈ ನ್ಯಾಯಾಲಯವು ಸೌಹಾರ್ದ ಸಹಕಾರಿಗಳ ಗ್ರಾಹಕರಿಗೆ ಸಂಬಂಧಪಟ್ಟ ಪ್ರಕರಣಗಳ ವಿಚಾರಣೆಯನ್ನು ಬೆಂಗಳೂರು ಮತ್ತು ಬೆಳಗಾವಿಯಲ್ಲಿ ತಲಾ 15 ದಿನಗಳ ಕಾಲ ನಡೆಸಲು ನಿರ್ಧರಿಸಲಾಗಿದೆ. ಇದರಿಂದ ತ್ವರಿತಗತಿಯಲ್ಲಿ ಪ್ರಕರಣಗಳ ವಿಚಾರಣೆ ಆಗಲಿದೆ ಎಂದು ಹೇಳಿದರು.



ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ



ಶ್ರೀ ಚೌರಾಶಿದೇವಿ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ನಿ., ಖಾನಾಪುರ


ಧನಶ್ರೀ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಖಾನಾಪುರ.


ಈಶಪ್ರಭು ಪತ್ತಿನ ಸೌಹಾರ್ದ ಸಹಕಾರಿ ನಿ., ಅರವಳ್ಳಿ


ಕಿತ್ತೂರು ರಾಣಿ ಚೆನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ.


ಶ್ರೀ ಮಹಾವೀರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹುಕ್ಕೇರಿ.


ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಾಗನೂರ


ಯಮಕನಮರಡಿ ಲಕ್ಷ್ಮೀ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಯಮಕನಮರಡಿ.

## ಜನಪ್ರಿಯ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ನಿ., ಶಿವಮೊಗ್ಗ ಸಹಕಾರಿಯ 3ನೇ ವಾರ್ಷಿಕ ಮಹಾಸಭೆ

ಜನಪ್ರಿಯ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ನಿ., ಸಹಕಾರಿಯ 2014–15ನೇ ಸಾಲಿನ 3ನೇ ವಾರ್ಷಿಕ ಮಹಾಸಭೆಯು ದಿನಾಂಕ 12.07.2015ರಂದು ನಂದಿ ವಿದ್ಯಾಸಂಸ್ಥೆ, ಸವಳಂಗ ರಸ್ತೆ, ಶಿವಮೊಗ್ಗದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಉಷಾ ಜಯರಾಜ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯ ಪ್ರಾರಂಭದಲ್ಲಿ ಈ ಸಾಲಿನಲ್ಲಿ ನಿಧನರಾದ ಸದಸ್ಯರಿಗಾಗಿ ಮೌನ ಆಚರಿಸಲಾಯಿತು. ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಬಿ.ಶೇಖರಪ್ಪನವರು ಆಡಳಿತ ವರದಿ ಮತ್ತು ಆರ್ಥಿಕ ಲೆಕ್ಕಪತ್ರಗಳನ್ನು ಮಂಡಿಸಿ, ಪ್ರಸಕ್ತ ಸಾಲಿನಲ್ಲಿ ಸಹಕಾರಿಯು ರೂ.8.39 ಲಕ್ಷ ಲಾಭ ಗಳಿಸಿರುವುದಾಗಿ ತಿಳಿಸಿದರು. ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಪಿ.ಜಯರಾಜ್‌ರವರು ಸಹಕಾರಿಯನ್ನು ಪ್ರಾರಂಭಿಸಿದ ಉದ್ದೇಶ, ಮುಂದಿನ ಗುರಿಗಳಾದ ಶಿವಮೊಗ್ಗ, ತುಮಕೂರು ಮತ್ತು ಬೆಂಗಳೂರಿನಲ್ಲಿ ಶಾಖೆಗಳನ್ನು ಪ್ರಾರಂಭಿಸುವುದು, ಮಾಲ್ ಪ್ರಾರಂಭ ಇತ್ಯಾದಿಗಳ ಬಗ್ಗೆ ತಿಳಿಸಿದರು.



# ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗಾಗಿ "ವಿಷಯಾಧಾರಿತ ತರಬೇತಿ ಕಾರ್ಯಗಾರ"

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನೇತೃತ್ವದಲ್ಲಿ ಕಲಬುರಗಿ ವಿಭಾಗದ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗಾಗಿ "ವಿಷಯಾಧಾರಿತ ತರಬೇತಿ ಕಾರ್ಯಗಾರವನ್ನು" ಹಮ್ಮಿಕೊಳ್ಳಲಾಗಿತ್ತು. ಸದರಿ ತರಬೇತಿಯ ಅವಧಿಯಲ್ಲಿ "ಲಾಭ ದಾಯಕತೆಯ ಮೇಲೆ ಬಡ್ಡಿಯ ಪರಿಣಾಮಗಳು", "ಸಂಪತ್ತು ನಿರ್ವಹಣೆ" ಮತ್ತು "ಸಂಪನ್ಮೂಲಗಳ ಸಂಗ್ರಹಣೆ ಮತ್ತು ಸಂಪನ್ಮೂಲಗಳ ನಿರ್ವಹಣೆ" ಈ ವಿಷಯಗಳ ಕುರಿತು ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗೆ 1 ದಿನದ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು.

**ರಾಯಚೂರು** : ದಿನಾಂಕ : 29.07.2015ರಂದು ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ವಿನಯ್ ರೆಸಿಡೆನ್ಸಿ, ಸಿಂಧನೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಪಂಪನಗೌಡ ಬಾದರ್ಲಿ, ನಿರ್ದೇಶಕರು, ಅಪೆಕ್ಸ್ ಸಹಕಾರಿ ಬ್ಯಾಂಕ್, ಬೆಂಗಳೂರು, ಅಧ್ಯಕ್ಷತೆಯನ್ನು ಶ್ರೀಮತಿ ಮಂಜುಳಾ ಪಾಟೀಲ್, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಹಾಗೂ ಮುಖ್ಯ ಅತಿಥಿಗಳಾಗಿ ಶ್ರೀ ಸತ್ಯನಾರಾಯಣ್, ಅಧ್ಯಕ್ಷರು, ಜನತಾ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಇವರು ಭಾಗವಹಿಸಿದ್ದರು. ಕಾರ್ಯಕ್ರಮದ ಆರಂಭದಲ್ಲಿ ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಇವರು ನಿಧನ ಹೊಂದಿದ ಕಾರಣ ಎರಡು ನಿಮಿಷ ಮೌನಾಚರಣೆಯನ್ನು ಮಾಡಿ



ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸದರಿ ಕಾರ್ಯಗಾರದಲ್ಲಿ 75 ಸೌಹಾರ್ದ ಸಹಕಾರಿಗಳಿಂದ 129 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.



**ಬಳ್ಳಾರಿ** : ದಿನಾಂಕ : 27.07.2015ರಂದು ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ಬಿಲ್ವ ರೆಸಿಡೆನ್ಸಿ" ಕಾಲೇಜು ರಸ್ತೆ, ಜಯರಾಂ ಆಸ್ಪತ್ರೆ ಎದುರು, ಹೊಸಪೇಟೆ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಕೆ.ವಿ.ಪತ್ತಾರ್, ಅಧ್ಯಕ್ಷರು, ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಹಾಗೂ ಮಾಜಿ ಅಧ್ಯಕ್ಷರು, ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಹಕಾರಿ ಸಂಘ, ಹುಬ್ಬಳ್ಳಿ ಇವರು ಉದ್ಘಾಟಿಸಿದರು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಆನಂದ ಎಲ್ ಎಸ್, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು ಹಾಗೂ ಮುಖ್ಯ ಅತಿಥಿಗಳಾಗಿ ಡಾ. ಹನುಮಂತರಾವ್ ಕೆ, ಅಧ್ಯಕ್ಷರು, ಶ್ರೀ ಗಾಯತ್ರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಇವರು ಹಾಜರಿದ್ದರು. ಸದರಿ ಕಾರ್ಯಗಾರವನ್ನು 46 ಸೌಹಾರ್ದ ಸಹಕಾರಿಗಳಿಂದ 72 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.

**ಕೊಪ್ಪಳ** : ದಿನಾಂಕ : 30.07.2015 ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಹಮ್ಮಿಕೊಳ್ಳಲಾಗಿತ್ತು. ಶ್ರೀ ಸಣ್ಣಸೂಗಪ್ಪ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪಸ್ಥಿತರಿದ್ದರು. ಸದರಿ ಕಾರ್ಯಗಾರದಲ್ಲಿ 60 ಸೌಹಾರ್ದ ಸಹಕಾರಿಗಳಿಂದ 94 ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನ ಪಡೆದುಕೊಂಡರು.





## ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಯಲ್ಲಿ ಗ್ರಾಹಕರ ಸಭೆ-2015

ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಯು ಆಯೋಜಿಸಲಾಗಿದ್ದ ಗ್ರಾಹಕರ ಸಭೆ-2015ರ ಸಂದರ್ಭದಲ್ಲಿ ರಾಯಚೂರು ಶಾಖೆಯಲ್ಲಿ ಸಹಕಾರಿಯ ಉತ್ತಮ ಗ್ರಾಹಕರಿಗೆ ಡಾ.ಸುನೀತಾ ಸಿದ್ರಾಮ್, ಸಹಕಾರ ಸಂಘಗಳ ಉಪನಿಬಂಧಕರು, ರಾಯಚೂರು & ಸಹಕಾರಿಯ ಅಧ್ಯಕ್ಷರಾದ ಡಾ.ಶಿವಶರಣಪ್ಪ ಇತ್ಲಿ ಅವರು ಸನ್ಮಾನಿಸುತ್ತಿರುವುದು.

## ನೇಗಿಲಯೋಗಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಹಕಾರಿಯ ಕಛೇರಿ ಉದ್ಘಾಟನಾ ಕಾರ್ಯಕ್ರಮ

ಎಡದಿಂದ ಬಲಕ್ಕೆ : ಸಹಕಾರಿಯ ನಿರ್ದೇಶಕರಾದ ಶ್ರೀ ಎಲ್.ಚರಣ್‌ರಾಜ್, ಅಧ್ಯಕ್ಷರಾದ ಡಾ. ಕೆ.ಎನ್. ಚಂದ್ರಶೇಖರ್, ಮಾಜಿ ಮಹಾಪೌರರಾದ ಶ್ರೀ ಸಂದೇಶ್‌ಸ್ವಾಮಿ, ಮಾಜಿ ಮುಡ ಅಧ್ಯಕ್ಷರಾದ ಶ್ರೀ ಎಲ್.ನಾಗೇಂದ್ರ, ಮರುಳೇಶ್ವರ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಮಹದೇವಯ್ಯ, ಕೆ.ಆರ್. ಕ್ಷೇತ್ರದ ಶಾಸಕರಾದ ಶ್ರೀ ಎಂ.ಕೆ. ಸೋಮಶೇಖರ್, ಮರುಳೇಶ್ವರ ಟ್ರಸ್ಟ್‌ನ ಕಾರ್ಯದರ್ಶಿ ಪ್ರೊ. ಕೆ.ಆರ್. ರಂಗಯ್ಯ, ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಕೆ. ನಾಗರಾಜು ರವರುಗಳು ಉಪಸ್ಥಿತರಿದ್ದರು.




## ಗಂಗೋತ್ರಿ ಮಹಿಳಾ ಸೌಹಾರ್ದ ಕೋ-ಆಪರೇಟಿವ್ ಲಿ., ಹುಮನಾಬಾದ್, ಬೀದರ್ ಸಹಕಾರಿಯ ಉದ್ಘಾಟನಾ ಸಮಾರಂಭ



ಗಂಗೋತ್ರಿ ಮಹಿಳಾ ಸೌಹಾರ್ದ ಕೋ-ಆಪರೇಟಿವ್ ಲಿ., ಹುಮನಾ ಬಾದ್, ಬೀದರ್ ಇದರ ಉದ್ಘಾಟನಾ ಸಮಾರಂಭವು ದಿನಾಂಕ 22-07-2015ರಂದು ನಡೆಯಿತು. ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ನೆರವೇರಿಸಿ ಮಾತನಾಡಿ, ರಾಜ್ಯದಲ್ಲಿ 3219ಕ್ಕೂ ಅಧಿಕ ಸೌಹಾರ್ದ ಸಹಕಾರಿಗಳಿದ್ದು, ನಿರುದ್ಯೋಗಿಗಳಿಗೆ ಉದ್ಯೋಗವನ್ನು ನೀಡುವ ಜೊತೆಗೆ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಸಹಕಾರಿ ಕ್ಷೇತ್ರವು ಪ್ರಮುಖ ಪಾತ್ರವಹಿಸಿದೆ. ಯಾವುದೇ ಸೌಹಾರ್ದ ಸಹಕಾರಿಯು ಪ್ರಾರಂಭವಾದಾಗ ಅಲ್ಲಿನ ಜನರ ಜೀವನ ಮಟ್ಟವು ಸುಧಾರಿಸುವಲ್ಲಿ ಅನುಮಾನವಿಲ್ಲ. ಇಂದು ಮಹಿಳಾ ಸಶಕ್ತೀಕರಣಕ್ಕೆ ಮಹಿಳಾ ಸಹಕಾರಿಗಳು ಪೂರಕವಾಗಿ ಕೆಲಸವನ್ನು ಮಾಡುತ್ತಿವೆ ಎಂದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕರಾದ ಶ್ರೀ ಸುಭಾಷ ಕಲ್ಲೂರ, ಶ್ರೀ ಶಿವಾನಂದ ಮಂಠಾಳಕರರವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗಂಗೋತ್ರಿ ಮಹಿಳಾ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್‌ನ ಅಧ್ಯಕ್ಷರಾದ ಶ್ರೀಮತಿ ಮಾಯಾದೇವಿ ಸಿಂಧನಕೇರಿ ವಹಿಸಿದ್ದರು.

## ವಿದ್ಯಾರ್ಥಿಗಳಿಗೆ ನೋಟ್‌ಬುಕ್, ಪೆನ್ನು ಮತ್ತು ವಿದ್ಯಾರ್ಥಿ ವೇತನದ ವಿತರಣಾ ಸಮಾರಂಭ

ಶಿವಸಂಗಮ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗದಗ ಸಹಕಾರಿಯ ಆಶ್ರಯದಲ್ಲಿ ನಂದೀಶ್ವರ ಮಠದಲ್ಲಿ ವಿ.ಜಿ.ಮೇಲಮಾಳಗಿ ಸಂಸ್ಕೃತ ಪಾಠಶಾಲೆ ಹಾಗೂ ಸದಾಶಿವಾನಂದ ಪ್ರಸಾದ ನಿಲಯದ ವಿದ್ಯಾರ್ಥಿಗಳಿಗೆ ನೋಟ್‌ಬುಕ್, ಪೆನ್ನು ಮತ್ತು ವಿದ್ಯಾರ್ಥಿ ವೇತನದ ವಿತರಣಾ ಸಮಾರಂಭ.



# ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961 ಮತ್ತು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2004 ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವುದಿಲ್ಲ

ಶ್ರೀಕಾಂತ ಬರುವೆ, ಸಹ ಪ್ರಧಾನ ವ್ಯವಸ್ಥಾಪಕರು, ಕರಾಸೌಸಂಸನಿ.

ಪೋಲಿಸ್ ಇಲಾಖೆಯು ಹಲವಾರು ಸೌಹಾರ್ದ ಸಹಕಾರಿಗಳನ್ನು ಬಡ್ಡಿ ವಿಧಿಸುತ್ತಿರುವುದರ ಕುರಿತಂತೆ ಪ್ರಶ್ನಿಸಿರುತ್ತಿರುವ ಪ್ರಸಂಗಗಳು ರಾಜ್ಯದ ಹಲವೆಡೆ ವರದಿಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ರಾಜ್ಯದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 ಮತ್ತು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2004 ಅನ್ವಯವಾಗುವ ಕುರಿತು ಸಂದೇಹ/ಗೊಂದಲವಿರುತ್ತದೆ. ಆದ್ದರಿಂದ ಈ ಕುರಿತು ಸಹಕಾರಿಗಳಿಗೆ ಇರುವ ಗೊಂದಲವನ್ನು ಹೋಗಲಾಡಿಸುವ ದೃಷ್ಠಿಯಿಂದ ಈ ಲೇಖನವನ್ನು ಪ್ರಕಟಿಸಲಾಗುತ್ತಿದೆ.

ಭಾರತ ದೇಶ ಕೃಷಿ ಪ್ರಧಾನ ದೇಶವಾಗಿದ್ದು ರೈತರೆ ದೇಶದ ಬೆನ್ನೆಲುಬಾಗಿ, ರಾಷ್ಟ್ರದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ರೈತರು ವಿವಿಧ ಕಾರಣಗಳಿಗಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಆತ್ಮಹತ್ಯೆಗೆ ಪ್ರಮುಖ ಕಾರಣ ಹಣಕಾಸಿನ ಸಂಸ್ಥೆಗಳು ವಿಧಿಸುತ್ತಿರುವ ಅಧಿಕ ಬಡ್ಡಿದರ ಕಾರಣವೆಂಬಂತೆ ಬಿಂಬಿತವಾಗುತ್ತಿದೆ. ಅದರಲ್ಲೂ ಮುಖ್ಯವಾಗಿ ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರಡಿ ನೋಂದಾಯಿತವಾಗಿರುವ ಖಾಸಗಿ ಲೇವಾದೇವಿ ಗಗಾರರು ಕಾರಣವೆಂದು ಮಾಧ್ಯಮಗಳಲ್ಲಿ ಪ್ರಚಾರವಾಗುತ್ತಿದೆ. ಸರ್ಕಾರವು ಸಹ ಈ ದಿಶೆಯಲ್ಲಿ ಮಿತಿಮೀರಿದ ಬಡ್ಡಿಗೆ ಕಡಿವಾಣ ಹಾಕುವ ಉದ್ದೇಶದಿಂದ ಪೋಲೀಸ್ ಇಲಾಖೆಗೆ ಬಡ್ಡಿಯನ್ನು ವಿಧಿಸುತ್ತಿರುವ ಹಣಕಾಸು ಸಂಸ್ಥೆಗಳ ಮೇಲೆ ಹದ್ದಿನ ಕಣ್ಣಿಡಲು ಸೂಚಿಸಿದೆ. ಕನಾಟಕ ಸರ್ಕಾರವು ಬಡ್ಡಿಗೆ ಕಡಿವಾಣ ಹಾಕುವ ದೃಷ್ಠಿಯಿಂದ ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧೀನಿಯಮ, 2004 ಜಾರಿಗೆ ತಂದಿದ್ದು, ಸದರಿ ಅಧಿನಿಯಮದಲ್ಲಿ ಲೇವಾದೇವಿಗಾರರು ಸಾಲಕ್ಕೆ ವಿಧಿಸುವ ಬಡ್ಡಿಗೆ ಮಿತಿಯನ್ನು ಹೇರಲಾಗಿರುತ್ತದೆ. ಪ್ರಸ್ತುತ ಪೋಲಿಸ್ ಇಲಾಖೆಯು ಹಲವಾರು ಸೌಹಾರ್ದ ಸಹಕಾರಿಗಳನ್ನು ಬಡ್ಡಿ ವಿಧಿಸುತ್ತಿರುವುದರ ಕುರಿತಂತೆ ಪ್ರಶ್ನಿಸಿರುತ್ತಿರುವ ಪ್ರಸಂಗಗಳು ರಾಜ್ಯದ ಹಲವೆಡೆ ವರದಿಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ರಾಜ್ಯದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 ಮತ್ತು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2004 ಅನ್ವಯವಾಗುವ ಕುರಿತು ಸಂದೇಹ/ಗೊಂದಲವಿರುತ್ತದೆ. ಆದ್ದರಿಂದ ಈ ಕುರಿತು ಸಹಕಾರಿಗಳಿಗೆ ಇರುವ ಗೊಂದಲವನ್ನು ಹೋಗಲಾಡಿಸುವ ದೃಷ್ಠಿಯಿಂದ ಈ ಲೇಖನವನ್ನು ಪ್ರಕಟಿಸಲಾಗುತ್ತಿದೆ.

**ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 ಮತ್ತು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧೀನಿಯಮ, 2004 ಅನ್ವಯವಾಗುವುದಿಲ್ಲ ಏಕೆಂದರೆ;**

1. ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 ಸದರಿ ಅಧಿನಿಯಮದಡಿ ನೋಂದಣಿ ಹೊಂದಿರುವ ಸಂಸ್ಥೆಗಳು/ವಕ್ತಿಗಳು/ಕಂಪನಿಗಳು/ನೋಂದಾಯಿತವಾಗಿರದ ಲೇವಾದೇವಿ ವ್ಯವಹಾರ ನಡೆಸುತ್ತಿರುವ ವ್ಯಕ್ತಿಗಳಿಗೆ ಅನ್ವಯಿಸುತ್ತದೆ. ಆದರೆ, ಯಾವುದೇ ಸೌಹಾರ್ದ ಸಹಕಾರಿಗಳು ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರಡಿ ನೋಂದಣಿ ಹೊಂದಿರುವುದಿಲ್ಲ.

2. ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರಡಿ ನೋಂದಣಿಗೊಂಡು/ನೋಂದಣಿಗೊಳ್ಳದೆ ಲೇವಾದೇವಿ ವ್ಯವಹಾರ ನಡೆಸುತ್ತೀರುವ ಸಂಸ್ಥೆ/ವ್ಯಕ್ತಿಗಳು ವಿವಿಧ ಸಾಲಗಳಿಗೆ ವಿಧಿಸಬಹುದಾದ ಗರಿಷ್ಠ ಬಡ್ಡಿಯ ಕುರಿತು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2004ರಲ್ಲಿ ಹೇಳಲಾಗಿರುತ್ತದೆಯೆ ಹೊರತು ಸಹಕಾರಿಗಳು ವಿಧಿಸಬಹುದಾದದ ಬಡ್ಡಿಗಳ ಕುರಿತು ಹೇಳಿರುವುದಿಲ್ಲ.

3. ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2004 ಕಲಂ 2(1)(ಬಿ) ಯಲ್ಲಿ ಮಿತಿಮೀರಿದ ಬಡ್ಡಿಯ ಕುರಿತು ಪರಿಭಾಷೆಯಲ್ಲಿ ಮಿತಿಮೀರಿದ ಬಡ್ಡಿ ಎಂದರೆ "ಲೆಕ್ಕ ಹಾಕಿದಾಗ ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 28ನೇ ಪ್ರಕರಣದಲ್ಲಿ ರಾಜ್ಯ ಸರ್ಕಾರವು ನಿಗದಿ ಪಡಿಸಿದ್ದಕಿಂತ ಹೆಚ್ಚಿನ ದರದ ಬಡ್ಡಿ ಆಗುವಂತೆ ಘಂಟೆ/ದಿನ/ಕಂತು/ಮಾಸಿಕ ಆಧಾರದ ಮೇಲೆ ಅಥವಾ ಯಾವುದೇ ಇತರೆ ರೀತಿಯಲ್ಲಿ ಬಡ್ಡಿ ವಿಧಿಸುವುದು ಮತ್ತು ಅವುಗಳನ್ನು ಒಳಗೊಳ್ಳುತ್ತದೆ." ಎಂದು ಹೇಳಲಾಗಿದೆ. ಸೌಹಾರ್ದ ಸಹಕಾರಿಗಳು ಘಂಟೆ/ದಿನ/ಕಂತು/ಮಾಸಿಕ ಆಧಾರದ ಮೇಲೆ ಬಡ್ಡಿ ವಿಧಿಸುತ್ತಿರುವುದಿಲ್ಲ. ಬದಲಾಗಿ ಸಹಕಾರಿಯ

ಸದಸ್ಯರು ಪಡೆದುಕೊಂಡಿರುವ ಸಾಲವನ್ನು ನಿಗದಿಪಡಿಸಿದ ಕಂತುಗಳಲ್ಲಿ ಮರುಪಾವತಿಗೆ ಅವಕಾಶವನ್ನು ಕಲ್ಪಿಸುತ್ತದೆ.

**4.** ಸಹಕಾರಿಯಿಂದ ಸಾಲ ಪಡೆಯುವ ವ್ಯಕ್ತಿಯು ಇಲ್ಲಿ ಸಾರ್ವಜನಿಕರಾಗಿರುವುದಿಲ್ಲ ಅವನು ಆ ಸಹಕಾರಿಯ ಸದಸ್ಯನೆ ಆಗಿರುತ್ತಾನೆ. ಅಲ್ಲದೆ ಈ ಕುರಿತು ಸಹಕಾರಿಗಳು ರೂಪಿಸಿಕೊಂಡಿರಬಹುದಾದ ಸಾಮಾನ್ಯ ನಿಯಮಾವಳಿಗಳಿಗೆ ಅಂತಹ ಸದಸ್ಯನನ್ನು ಒಳಗೊಂಡಿರುವ ಸಾಮಾನ್ಯ ನಿಕಾಯದ ಸಭೆಯಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ. ಅಂದರೆ, ತಾನು ಪಡೆಯುವ ಸಾಲದ ಕುರಿತು ತಾನೆ ನಿಯಮಾವಳಿಗಳನ್ನು ರಚಿಸಿಕೊಳ್ಳುವ ಅಧಿಕಾರ ಸದಸ್ಯನಿಗಿರುತ್ತದೆ. ಅಲ್ಲದೆ, ಹೀಗೆ ಸಾಲವನ್ನು ಪಡೆದ ಸದಸ್ಯನು ಸಹಕಾರಿಯು ಗಳಿಸುವ ಲಾಭದಲ್ಲಿ ಲಾಭಾಂಶ ಪಡೆಯುವ ಮೂಲಕ ಪಾಲನ್ನೂ ಪಡೆಯುತ್ತಾನೆ.

**5.** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997ರ ಕಲಂ 23(1) ರನ್ವಯ ಸಹಕಾರಿಯ ಅಂತಿಮ ಅಧಿಕಾರ ಸಾಮಾನ್ಯ ನಿಕಾಯದಲ್ಲಿ ನಿಹಿತವಾಗಿರುತ್ತದೆ. ಅಂತಯೇ ಸಹಕಾರಿಯು ತನ್ನ ಸದಸ್ಯರಿಗೆ ನೀಡುವ ಸಾಲದ ಕುರಿತು ನಿಯಮಗಳನ್ನು ರೂಪಿಸಿಕೊಂಡು ವಿವಿಧ ಸಾಲಗಳಿಗೆ ವಿಧಿಸುವ ಬಡ್ಡಿಯನ್ನು ಕಾಲಕಾಲಕ್ಕೆ ನಿರ್ಣಯಿಸುವ ಅಧಿಕಾರವನ್ನು ಪಡೆದುಕೊಂಡಿದ್ದರೆ ಅಂತಹ ಪ್ರಕ್ರಿಯೆಯು ಸಾಲಕ್ಕೆ ಬಡ್ಡಿ ವಿಧಿಸುವುದರ ಕುರಿತಂತೆ ಕಾನೂನುಬದ್ಧವಾಗಿರುತ್ತದೆ.

**ಇವೆಲ್ಲ ಕಾರಣಗಳಿಂದ ಮೇಲೆ ತಿಳಿಸಿದ ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 ಮತ್ತು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧೀನಿಯಮ, 2004 ಇವುಗಳು ಅನ್ವಯವಾಗುವುದಿಲ್ಲ.**

ಸಹಕಾರಿಗಳು ಪೋಲೀಸ್ ಅಥವಾ ಇನ್ಯಾವುದೇ ಇಲಾಖೆಯಿಂದ ವಿಚಾರಣೆ ಎದುರಿಸಬೇಕಾಗಿ ಬಂದಲ್ಲಿ ಇ ಮೇಲಿನ ಅಂಶಗಳನ್ನು ಸಂಬಂಧಿಸಿದವರಿಗೆ ಮನವರಿಕೆ ಮಾಡಿಕೊಡುವುದರ ಮೂಲಕ ಸಂಭಾವ್ಯ ತೊಂದರೆಯನ್ನು ತಪ್ಪಿಸಿಕೊಳ್ಳಬಹುದಾಗಿರುತ್ತದೆ.

## ನಿರ್ಮಾಣ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ



ದಿನಾಂಕ : 26-07-2015ರ ಆದಿತ್ಯವಾರದಂದು ಸಹಕಾರಿಯ 2014-15ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಉಡುಪಿಯ ಪ್ರತಿಷ್ಠಿತ ಹೋಟೆಲ್ ನೈವೇದ್ಯ ಇದರ ಅನುಗ್ರಹ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಮಂಚಿ ಶ್ರೀ ನಿತ್ಯಾನಂದ ನಾಯಕ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು 15 ಲಕ್ಷಕ್ಕೂ ಅಧಿಕ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.15 ಪಾಲುಮುನಾಫೆಯನ್ನು ಘೋಷಿಸಲಾಯಿತು.

## ಸಂತಾಪ



ಹಿರಿಯ ಸಹಕಾರಿ ಕರ್ನಾಟಕ ಸರಕಾರದ "ಸಹಕಾರ ರತ್ನ" ಪುರಸ್ಕೃತ ಶ್ರೀ ಶಾಂತಪ್ಪಣ್ಣಾ ಮಿರ್ಜಿಯವರ ನಿಧನಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಂತಾಪ ವ್ಯಕ್ತಪಡಿಸಿದೆ.

## ದಿ ಸನ್‌ಸ್ಟಾರ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಸಹಕಾರಿಯ 3ನೇ ಸರ್ವಸದಸ್ಯರ ಸಾಮಾನ್ಯಸಭೆ

ಸಹಕಾರಿಯ 3ನೇ ವರ್ಷದ ಸರ್ವಸದಸ್ಯರ ಸಭೆಯು ದಿನಾಂಕ : 26-07-2015ರಂದು ಸಹಕಾರಿಯ ಕಛೇರಿಯ ಆವರಣದಲ್ಲಿ ಯಶಸ್ವಿಯಾಗಿ ನಡೆಯಿತು. ಈ ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಶ್ರೀ ಲೋಕೇಶ್, ಮಾಜಿ ಪುರಸಭಾ ಮುಖ್ಯಾಧಿಕಾರಿಗಳು ಭಾಗವಹಿಸಿದ್ದರು.



# ಮೈಸೂರು ವಿಭಾಗೀಯ ಕಛೇರಿ ಉದ್ಘಾಟನೆ ಮತ್ತು ಸಹಕಾರ ಸಮಾವೇಶದ ಕುರಿತು ಮೈಸೂರು ವಿಭಾಗದ ವಿವಿಧ ಜಿಲ್ಲೆಗಳಲ್ಲಿ ಸಂಪರ್ಕ ಸಭೆ ಹಾಗೂ ಪತ್ರಿಕಾಗೋಷ್ಠಿ

**ದಕ್ಷಿಣ ಕನ್ನಡ ಜಿಲ್ಲೆ :** ದಿನಾಂಕ : 27/07/2015 ರಂದು ಮೈಸೂರು ವಿಭಾಗದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೈಸೂರು ವಿಭಾಗೀಯ ಕಛೇರಿ ಉದ್ಘಾಟನೆ ಮತ್ತು ಸಹಕಾರ ಸಮಾವೇಶದ ಕುರಿತು ಪತ್ರಿಕಾ ಗೋಷ್ಠಿಯನ್ನು ಮಂಗಳೂರು ಪತ್ರಿಕಾಭವನದಲ್ಲಿ ಬೆಳಿಗ್ಗೆ 10.30 ಗಂಟೆಗೆ ಹಮ್ಮಿಕೊಳ್ಳಲಾಗಿತ್ತು. ಈ ಪತ್ರಿಕಾಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್, ನಿರ್ದೇಶಕರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರ ಹಾಗೂ ಮೈಸೂರು ವಿಭಾಗೀಯ ಅಧಿಕಾರಿ ಶ್ರೀ ಶಿವಕುಮಾರ ಬಿರಾದಾರ್‌ರವರು ಉಪಸ್ಥಿತರಿದ್ದರು. ಸದರಿ ಪತ್ರಿಕಾಗೋಷ್ಠಿಯಲ್ಲಿ ವಿಭಾಗೀಯ ಕಛೇರಿ ಉದ್ಘಾಟನಾ ಮತ್ತು ಸಹಕಾರ ಸಮಾವೇಶಕ್ಕೆ ಎಲ್ಲಾ ಸಹಕಾರಿಗಳ ಅಧ್ಯಕ್ಷರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸದಸ್ಯರನ್ನು ಆಹ್ವಾನಿಸುವ ಮೂಲಕ ಸಂಯುಕ್ತ ಸಹಕಾರಿಯ ಬೆಳವಣಿಗೆಯನ್ನು ವಿವರಿಸಿದರು.

ನಂತರ ಬೆಳಿಗ್ಗೆ 11 ಗಂಟೆಗೆ ಕ್ಯಾಂಪ್ಕೋ ಸಭಾಭವನ, ಮಂಗಳೂರು ಇಲ್ಲಿ ನಡೆದ ಮೈಸೂರು ವಿಭಾಗೀಯ ಕಛೇರಿ ಉದ್ಘಾಟನೆ ಮತ್ತು ಸಹಕಾರ ಸಮಾವೇಶದ ಸಲುವಾಗಿ ಏರ್ಪಡಿಸಲಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರ ಸಂಪರ್ಕ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ಹಾಗೂ ನಿರ್ದೇಶಕರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಉಪಸ್ಥಿತರಿದ್ದರು. ಸದರಿ ಸಭೆಗೆ 37 ಸೌಹಾರ್ದ ಸಹಕಾರಿಗಳಿಂದ 38 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿಕ್ಕಮಗಳೂರು ಜಿಲ್ಲೆ :** ದಿನಾಂಕ : 28/07/2015 ರಂದು ಚಿಕ್ಕಮಗಳೂರು ಜಿಲ್ಲೆಯ ದ್ಯಾವೇಗೌಡ ಸಭಾಂಗಣ, ಕೊಪ್ಪ ಮುಖ್ಯರಸ್ತೆ, ಇಲ್ಲಿ ಬೆಳಿಗ್ಗೆ 11.30 ಗಂಟೆಗೆ ಮೈಸೂರು ವಿಭಾಗೀಯ ಕಛೇರಿ ಉದ್ಘಾಟನೆ ಮತ್ತು ಸಹಕಾರ ಸಮಾವೇಶದ ಸಲುವಾಗಿ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ 33 ಸೌಹಾರ್ದ ಸಹಕಾರಿಗಳು ಭಾಗವಹಿಸಿದ್ದವು.

ದೈವಾದೀನರಾದ ಮಾಜಿ ರಾಷ್ಟ್ರಪತಿ ಡಾ||ಎ.ಪಿ.ಜೆ.ಅಬ್ದುಲ್ ಕಲಾಂರವರಿಗೆ 2 ನಿಮಿಷಗಳ ಕಾಲ ಮೌನಾಚರಣೆಯನ್ನು ಮಾಡುವ ಮೂಲಕ ಸಂತಾಪವನ್ನು ಸೂಚಿಸಿ, ಸಭೆಯನ್ನು ಆರಂಭಿಸಲಾಯಿತು. ಸದರಿ ಸಭೆಯ ಪ್ರಾಸ್ತಾವಿಕ ಭಾಷಣ ಹಾಗೂ ಸ್ವಾಗತವನ್ನು ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರ್‌ರವರು ನಡೆಸಿಕೊಟ್ಟರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್, ನಿರ್ದೇಶಕರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರ, ಶ್ರೀ ಜಿ.ಎಸ್.ಮಹಾಬಲ ಹಾಗೂ ಯಡೆಗೆರೆ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿ.,ದ ಅಧ್ಯಕ್ಷರಾದ ಶ್ರೀ ಸುಬ್ರಮಣ್ಯರವರು ಉಪಸ್ಥಿತರಿದ್ದರು.

**ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳು :** ದಿನಾಂಕ : 29/07/2015 ರಂದು ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರ ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ವಹಿಸಿದ್ದರು. ನಂತರ ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ಶ್ರೀ ಎಸ್.ಆರ್. ಸತೀಶ್‌ಚಂದ್ರರವರು ಸಹಕಾರಿಗಳ ಸದ್ಯದ ಪರಿಸ್ಥಿತಿ ಹಾಗೂ ಸವಾಲುಗಳ ಕುರಿತು ಮಾತನಾಡಿದರು. ನಂತರ ಮಾನ್ಯ ಅಧ್ಯಕ್ಷರು ಸದಸ್ಯ ಸಹಕಾರಿಗಳೊಂದಿಗೆ ಅವರ ಸಮಸ್ಯೆಗಳ ಕುರಿತು ಚರ್ಚಿಸುವ ಮೂಲಕ ಪ್ರಶ್ನೋತ್ತರ ಕಾರ್ಯಕ್ರಮ ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ದಿನೇಶ್ ಗುಪ್ತ ಹಾಗೂ ಶ್ರೀ ನಾಗರಾಜುರವರನ್ನು ಸನ್ಮಾನಿಸಲಾಯಿತು. ಕೊನೆಯದಾಗಿ, ಮಾನ್ಯ ಅಧ್ಯಕ್ಷರು ಅಧ್ಯಕ್ಷೀಯ ಭಾಷಣದಲ್ಲಿ ಮೈಸೂರು ವಿಭಾಗವು ಅತಿ ಕಡಿಮೆ ಸಹಕಾರಿಗಳನ್ನು ಹೊಂದಿದ್ದು, ಇನ್ನೂ ಹೆಚ್ಚಿನ ಸಹಕಾರಿಗಳನ್ನು ಹುಟ್ಟು ಹಾಕಬೇಕೆಂದು ತಿಳಿಸಿದರು ಹಾಗೂ ಎಲ್ಲರನ್ನು ಮೈಸೂರು

ವಿಭಾಗಿಯ ಕಛೇರಿ ಉದ್ಘಾಟನಾ ಕಾರ್ಯಕ್ರಮ ಹಾಗೂ ಸಹಕಾರ ಸಮಾವೇಶಕ್ಕೆ ಆಹ್ವಾನಿಸಿದರು.

**ಉಡುಪಿ ಜಿಲ್ಲೆ :** ದಿನಾಂಕ : 27/07/2015 ರಂದು ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕು ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ ಸಭಾಭವನ, ಕಿನ್ನಿಮೂಲ್ಕಿ ಇಲ್ಲಿ ಮೈಸೂರು ವಿಭಾಗೀಯ ಕಛೇರಿಯ ಉದ್ಘಾಟನೆ ಮತ್ತು ಸಹಕಾರ ಸಮಾವೇಶ ಸಲುವಾಗಿ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರ ಸಂಪರ್ಕ ಸಭೆಯನ್ನು ಮಧ್ಯಾಹ್ನ 3.30 ಗಂಟೆಗೆ ಆಯೋಜಿಸಲಾಗಿತ್ತು. ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರ್‌ರವರು ಸ್ವಾಗತಿಸಿದರು. ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಪ್ರಾಸ್ತವಿಕ ಭಾಷಣ ಮಾಡಿದರು. ನಂತರ 'ಸೌಹಾರ್ದ ಸಹಕಾರಿಗಳ ಸಮಸ್ಯೆಗಳು ಮತ್ತು ಪರಿಹಾರಗಳು' ವಿಷಯದ ಕುರಿತು ಪ್ರಶ್ನೋತ್ತರ ಹಾಗೂ ಚರ್ಚೆ ನಡೆಯಿತು. ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ಮುಖ್ಯ ಅಥಿತಿಗಳ ಭಾಷಣವನ್ನು ಮಾಡಿದರು. ಈ ಸಭೆಯಲ್ಲಿ ಉಡುಪಿ ಜಿಲ್ಲೆಯ 58 ಸೌಹಾರ್ದ ಸಹಕಾರಿಗಳಿಂದ 60 ಪ್ರತಿನಿಧಿಗಳು ಭಾಗವಹಿಸಿದ್ದರು.

**ಹಾಸನ ಜಿಲ್ಲೆ :** ದಿನಾಂಕ : 28/07/2015 ರಂದು ಮೈಸೂರು ವಿಭಾಗೀಯ ಕಛೇರಿಯ ಉದ್ಘಾಟನೆ ಮತ್ತು ಸಹಕಾರ ಸಮಾವೇಶದ ಸಲುವಾಗಿ ಏರ್ಪಡಿಸಲಾಗಿದ್ದ ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರ ಸಂಪರ್ಕ ಸಭೆಯನ್ನು ಸಾಯಂಕಾಲ 5.15 ಗಂಟೆಗೆ ಭಾರತದ ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರವರ ನಿಧನಕ್ಕೆ ಮೌನಾಚಾರಣೆ ಮಾಡುವ ಮೂಲಕ ಪ್ರಾರಂಭಿಸಲಾಯಿತು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್. ಸತೀಶ್‌ಚಂದ್ರರವರು ಪ್ರಾಸ್ತವಿಕ ಭಾಷಣವನ್ನು ಮಾಡಿದರು. ನಂತರ 'ಸೌಹಾರ್ದ ಸಹಕಾರಿಗಳ ಸಮಸ್ಯೆಗಳು ಮತ್ತು ಪರಿಹಾರಗಳು' ಈ ವಿಷಯದ ಕುರಿತು ಪ್ರಶ್ನೋತ್ತರ ಹಾಗೂ ಚರ್ಚೆ ನಡೆಯಿತು.

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶಿವರುದ್ರಪ್ಪನವರು ಅಧ್ಯಕ್ಷೀಯ ಭಾಷಣವನ್ನು ಮತ್ತು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ಮುಖ್ಯ ಅಥಿತಿಗಳ ಭಾಷಣವನ್ನು ಮಾಡಿದರು.

ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಹಮ್ಮಿಕೊಂಡಿರುವ ಕಾರ್ಯ ಯೋಜನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು ಹಾಗೂ ಮುಂದಿನ ತಿಂಗಳು ಆಗಸ್ಟ್ 6 ರಂದು ನಡೆಯುವ ಮೈಸೂರು ವಿಭಾಗೀಯ ಕಛೇರಿಯ ಉದ್ಘಾಟನೆ ಮತ್ತು ಸಹಕಾರ ಸಮಾವೇಶಕ್ಕೆ ಆಮಂತ್ರಣವನ್ನು ನೀಡಿದರು. ಹಾಗೆಯೇ, ಆಗಸ್ಟ್ 20 ರಂದು ನಡೆಯುವ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೂ ಆಮಂತ್ರಣವನ್ನು ನೀಡಿದರು. ಈ ಸಭೆಯಲ್ಲಿ ಹಾಸನ ಜಿಲ್ಲೆಯ 24 ಸೌಹಾರ್ದ ಸಹಕಾರಿಗಳಿಂದ 28 ಪ್ರತಿನಿಧಿಗಳು ಭಾಗವಹಿಸಿದ್ದರು.

## ಪದಾವಧಿ ಮುಗಿದು ಚುನಾವಣೆ ನಡೆಯದ ಸೌಹಾರ್ದ ಸಹಕಾರಿಗಳಲ್ಲಿ ಹಾಲಿ ಆಡಳಿತ ಮಂಡಲಿಗೆ ಮುಂದುವರೆಯಲು ಅವಕಾಶ – ಹೈಕೋರ್ಟ್ ಆದೇಶ

ಪ್ರಸಕ್ತ ಆಡಳಿತ ಮಂಡಲಿಯ ಪದಾವಧಿ ಮುಕ್ತಾಯಗೊಂಡಿದ್ದು, ಚುನಾವಣೆಯನ್ನು ನಡೆಸಿಕೊಡಲು ಚುನಾವಣಾ ಪ್ರಾಧಿಕಾರವನ್ನು ವಿನಂತಿಸಿಕೊಂಡ ನಂತರ ಚುನಾವಣಾ ಪ್ರಾಧಿಕಾರವು ನಿಗದಿತ ಅವಧಿಯಲ್ಲಿ ಚುನಾವಣೆಯನ್ನು ನಡೆಸಿಕೊಡಲು ಸಾಧ್ಯವಾಗಿರದ ಶ್ರೀ ಮಹಾತ್ಮಾ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ನಿಪ್ಪಾಣಿ, ದಿ ಸಂಕೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಇವುಗಳಿಗೆ ಆಡಳಿತಗಾರರನ್ನು ನೇಮಿಸಬಾರದೆಂದು, ಸದರಿ ಸೌಹಾರ್ದ ಸಹಕಾರಿಗಳು, ಅವುಗಳ ಹಾಲಿ ಪದಾಧಿಕಾರಿಗಳು ಹೈಕೋರ್ಟ್ ಧಾರವಾಡ ಬೆಂಚನಲ್ಲಿ ರಿಟ್ ಸಲ್ಲಿಸಿದ್ದರು.

ಮಾನ್ಯ ಉಚ್ಚನ್ಯಾಯಾಲಯವು ಸದರಿಯವರ ಮನವಿಯನ್ನು ಪರಿಗಣಿಸಿ, ಚುನಾವಣೆ ನಡೆದು ನೂತನ ಆಡಳಿತ ಮಂಡಲಿಯು ಅಧಿಕಾರ ವಹಿಸಿಕೊಳ್ಳುವವರೆಗೆ ಹಾಲಿ ಆಡಳಿತ ಮಂಡಲಿಯು ಮುಂದುವರೆಯುತ್ತದೆ ಎಂದು ಮಧ್ಯಂತರ ಆದೇಶ ನೀಡಿದೆ.

ದಿ ಸಂಕೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಸಂಕೇಶ್ವರ ರಿಟ್ ಅರ್ಜಿ ಸಂಖ್ಯೆ 104163/2015 (CS-EL/M) & 104168–104180/2015

ಶ್ರೀ ಮಹಾತ್ಮಾ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಿಪ್ಪಾಣಿ ರಿಟ್ ಅರ್ಜಿ ಸಂಖ್ಯೆ 104460/2015 (CS-EL/M) & 104464–104474/2015

## ಸಂಯುಕ್ತ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ 14ನೇ ವಾರ್ಷಿಕ ಸಾಮಾನ್ಯ ಸಭೆಯು **ದಿನಾಂಕ : 20 ಆಗಸ್ಟ್ 2015, ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಮೈಸೂರು ಬ್ಯಾಂಕ್ ವೃತ್ತದ ಹತ್ತಿರ, ಬೆಂಗಳೂರು ಇಲ್ಲಿ ನಡೆಯಲಿದೆ.** ಸಭೆಯ ನೋಟೀಸನ್ನು ಅಜೆಂಡಾ ಮತ್ತು ವಿವರವಾದ ಟಿಪ್ಪಣಿಗಳೊಂದಿಗೆ ಎಲ್ಲಾ ಅರ್ಹ ಸದಸ್ಯರಿಗೆ ದಿನಾಂಕ 30 ಜುಲೈ 2015ರಂದು ಸಾಮಾನ್ಯ ಅಂಚೆ ಮೂಲಕ ಕಳುಹಿಸಲಾಗಿದೆ. ಸಭೆಯ ಅಜೆಂಡಾ, ಟಿಪ್ಪಣಿಗಳು ಮತ್ತು ಅರ್ಹ ಸದಸ್ಯರ ಪಟ್ಟಿಯು ಸಂಯುಕ್ತ ಸಹಕಾರಿಯ ವೆಬ್‌ಸೈಟ್ : www.souharda.coop ನಲ್ಲಿ ಲಭ್ಯವಿರುತ್ತದೆ. ಎಲ್ಲ ಅರ್ಹ ಸದಸ್ಯರು ಮಾತ್ರ ಈ ಪ್ರಕಟಣೆಯನ್ನೇ ನೋಟೀಸು ಎಂದು ಪರಿಗಣಿಸಿ ಸಭೆಯಲ್ಲಿ ಹಾಜರಿರಲು ಕೋರಿದೆ.

ಆಡಳಿತ ಮಂಡಲಿಯ ಅನುಮತಿ ಮೇರೆಗೆ,

ಸಹಿ/–

**ಶರಣಗೌಡ ಜಿ. ಪಾಟೀಲ,** ವ್ಯವಸ್ಥಾಪಕ ನಿರ್ದೇಶಕರು

### ದಿನಾಂಕ 20-08-2015ರಂದು ಹಮ್ಮಿಕೊಂಡಿರುವ ಕಾರ್ಯಚಟುವಟಿಕೆಗಳು

- **ಬೆಳಗ್ಗೆ 10.00 ಗಂಟೆಗೆ – ಸಹಕಾರಿ ತೀರ್ಪುಗಳ ಪುಸ್ತಕ ಹಾಗೂ ಕಿರು ಹೊತ್ತಿಗೆಗಳ ಬಿಡುಗಡೆ.**
- **ಬೆಳಗ್ಗೆ 11.00 ಗಂಟೆಗೆ – ವಾರ್ಷಿಕ ಸಾಮಾನ್ಯ ಸಭೆ.**

### ಸಂವಾದ ಕಾರ್ಯಕ್ರಮ

**ವಾರ್ಷಿಕ ಸಾಮಾನ್ಯ ಸಭೆಯ ಮುಕ್ತಾಯದ ನಂತರ ಮಧ್ಯಾಹ್ನದ ಅವಧಿಯಲ್ಲಿ "ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 ಮತ್ತು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2004" ವಿಷಯ ಕುರಿತು ಸಂವಾದ ಕಾರ್ಯಕ್ರಮ.**

| | | |
|---|---|---|
| ಅಧ್ಯಕ್ಷತೆ | : | **ಶ್ರೀ ಗುರುನಾಥ ಜಾಂತಿಕರ,** ಅಧ್ಯಕ್ಷರು, ಕರಾಸೌಸಂಸನಿ., ಬೆಂಗಳೂರು. |
| ಸಂಪನ್ಮೂಲ ವ್ಯಕ್ತಿಗಳು | : | **ಶ್ರೀ ಹೆಚ್.ಎಸ್. ನಾಗರಾಜಯ್ಯ,** ಅಪರ ನಿಬಂಧಕರು, ನಿಬಂಧಕರ ಕಛೇರಿ, ಬೆಂಗಳೂರು. |
| | | **ಶ್ರೀ ಬಿ.ವಿ. ರವೀಂದ್ರನಾಥ,** ಚಾರ್ಟೆರ್ಡ್ ಅಕೌಂಟೆಂಟ್, ಸಾಗರ. |
| | | **ಶ್ರೀ ಪಿ.ಎಸ್. ನಂಜಾರೆಡ್ಡಿ,** ಹೈಕೋರ್ಟ್ ನ್ಯಾಯವಾದಿಗಳು, ಬೆಂಗಳೂರು. |
| ಸಂವಾದಕಾರರು | : | **ಶ್ರೀ ಭಾಸ್ಕರ ಹೆಗಡೆ ಕಾಗೇರಿ,** ನಿರ್ದೇಶಕರು, ಕರಾಸೌಸಂಸನಿ., ಬೆಂಗಳೂರು |
| ಉಪಸ್ಥಿತಿ | : | **ಶ್ರೀ ಹೆಚ್.ವಿ. ರಾಜೀವ್,** ಉಪಾಧ್ಯಕ್ಷರು, ಕರಾಸೌಸಂಸನಿ., ಬೆಂಗಳೂರು. |

## ಸೌಹಾರ್ದ ಸಹಕಾರಿ ನಿರ್ದೇಶಕರ ಅಧ್ಯಯನ ಪ್ರವಾಸ

ಅಕ್ಟೋಬರ್ 2 ರಿಂದ ಅಕ್ಟೋಬರ್ 8 ರವರೆಗೆ 7 ದಿನಗಳ 2ನೇ ತಂಡದ ಕರ್ನಾಟಕ, ಗೋವಾ, ಮಹಾರಾಷ್ಟ್ರ ರಾಜ್ಯಗಳ ಅಧ್ಯಯನ ಪ್ರವಾಸ. ಒಬ್ಬರಿಗೆ ರೂ. 18,000/– ಹಾಗೂ 3ನೇ ತಂಡದ ಕರ್ನಾಟಕ, ಕೇರಳ ಹಾಗೂ ತಮಿಳನಾಡು ರಾಜ್ಯಗಳ ಅಧ್ಯಯನ ಪ್ರವಾಸ. ಒಬ್ಬರಿಗೆ ರೂ.12,000/–. ಎರಡೂ ತಂಡಗಳಲ್ಲಿ ಕೇವಲ 30 ಜನರಿಗೆ ಮಾತ್ರ ಅವಕಾಶ. ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಬಹುದಾಗಿದೆ. ಪ್ರತಿನಿಧಿಗಳು ಪೂರ್ಣಪ್ರಮಾಣದಲ್ಲಿ ನೋಂದಣಿಯಾದ ನಂತರ ಪ್ರವಾಸದ ವಿವರಗಳನ್ನು ತಿಳಿಸಲಾಗುವುದು.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

**ಶ್ರೀಕಾಂತ ಬರುವೆ**

**1. ಸಹಕಾರಿಯ ನಿರ್ದೇಶಕರ/ಮುಖ್ಯ ಕಾರ್ಯನಿವಾಹಕನ ಸಂಬಂಧಿಯನ್ನು ಸಿಬ್ಬಂದಿಯಾಗಿ ನೇಮಕ ಮಾಡಿಕೊಳ್ಳಬಹುದೇ?**

ಸಹಕಾರಿಯ ನಿರ್ದೇಶಕರ/ಮುಖ್ಯ ಕಾರ್ಯನಿವಾಹಕನ ಸಂಬಂಧಿ ಯನ್ನು ಸಿಬ್ಬಂದಿಯಾಗಿ ನೇಮಕ ಮಾಡಿಕೊಳ್ಳಬಹುದು ಆದರೆ, ಅಂತಹ ನೇಮಕಾತಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997ರ ಕಲಂ 23(3)(ಕ್ಯೂ)ರನ್ವಯ ಸಹಕಾರಿಯ ಸಾಮಾನ್ಯ ಸಭೆಯ ಪರಿಗಣನೆಗೆ ಮಂಡಿಸುವುದು ಕಡ್ಡಾಯವಾಗಿರುತ್ತದೆ.

**2. ಸಹಕಾರಿಯು ವಂತಿಗೆಯನ್ನು ನೀಡಬಹುದೇ?**

ಸಹಕಾರಿಯು ವಂತಿಗೆಯನ್ನು ನೀಡಬಹುದು ಆದರೆ, ಅಂತಹ ವಂತಿಗೆಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997ರ ಕಲಂ 19ರನ್ವಯ ಸಹಕಾರಿಯು ಒಂದು ರಾಜಕೀಯ ಪಕ್ಷಕ್ಕೆ ಅಥವಾ ಮತೀಯ ನಂಬಿಕೆಯ ಹಿತಾಸಕ್ತಿಯ ಅಭಿವೃದ್ಧಿಯ ಉದ್ದೇಶವನ್ನು ಹೊಂದಿರುವ ಒಂದು ಸಂಘಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಗದು ಅಥವಾ ವಸ್ತುವಿನ ರೂಪದಲ್ಲಿ ನೀಡುವಂತಿಲ್ಲ.

**3. ಸಹಕಾರಿಯು ಕಾರ್ಯಾನುಗುಣ ನಿರ್ದೇಶಕರನ್ನು ಹೊಂದುವುದು ಕಡ್ಡಾಯವೇ?**

ಸಹಕಾರಿಯು ಕಾರ್ಯಾನುಗುಣ ನಿರ್ದೇಶಕರನ್ನು ಹೊಂದುವುದು ಕಡ್ಡಾಯವಲ್ಲ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997ರ ಕಲಂ 24(1)ರ 4ನೇ ಪರಂತುಕದನ್ವಯ ಅವಶ್ಯವಿದ್ದಲ್ಲಿ ಮಾತ್ರ ಕಾರ್ಯಾನುಗುಣ ನಿರ್ದೇಶಕರನ್ನು ಆಡಳಿತ ಮಂಡಲಿಗೆ ಸೇರಿಸಿಕೊಳ್ಳಬಹುದು.

**4. ಸಹಕಾರಿಯು ಹೂಡಿಕೆಗಳ ಕುರಿತು ಸಹಕಾರಿಯ ಮುಖ್ಯ ಕಾರ್ಯ ನಿರ್ವಾಹಕನು ನಿರ್ಣಯ ಕೈಗೊಳ್ಳುವ ಅಧಿಕಾರ ಹೊಂದಿರುತ್ತಾನೆಯೇ?**

ಸಹಕಾರಿಯ ಹೂಡಿಕೆ ಕುರಿತು ಸಹಕಾರಿಯ ಮುಖ್ಯ ಕಾರ್ಯ ನಿರ್ವಾಹಕನು ನಿರ್ಣಯ ಕೈಗೊಳ್ಳುವ ಅಧಿಕಾರ ಹೊಂದಿರುವುದಿಲ್ಲ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 27(1)(ಎಫ್)ರನ್ವಯ ಸಹಕಾರಿಯ ಹೂಡಿಕೆಗಳ ಕುರಿತು ಸಹಕಾರಿಯ ಆಡಳಿತ ಮಂಡಲಿಯು ನಿರ್ಧರಿಸಬೇಕಿರುತ್ತದೆ.

**5. ಸಹಕಾರಿಯ ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ರಾಜೀನಾಮೆ ನೀಡಿದಾಗ ಅನುಸರಿಸಬೇಕಾದ ಕ್ರಮವೇನು?**

ಸಹಕಾರಿಯ ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನಿಗೆ ಸ್ವಹಸ್ತ ಬರಹದ ಮೂಲಕ ರಾಜೀನಾಮೆಯನ್ನು ಸಲ್ಲಿಸತಕ್ಕದ್ದು. ರಾಜೀನಾಮೆ ಸಲ್ಲಿಸಿದ ದಿನಾಂಕದಿಂದ ಹದಿನೈದು ದಿನಗಳವರೆಗೆ ಅಂತಹ ರಾಜೀನಾಮೆಯನ್ನು ಅಂಗೀಕರಿಸುವಂತಿಲ್ಲ. ಹದಿನೈದು ದಿನಗಳ ಒಳಗೆ ರಾಜೀನಾಮೆಯನ್ನು ಸ್ವಹಸ್ತ ಬರಹದ ಮೂಲಕ ವಾಪಸು ಪಡೆಯಬಹುದಾಗಿರುತ್ತದೆ. ರಾಜೀನಾಮೆ ನೀಡಿದ ದಿನಾಂಕದಿಂದ ಹದಿನೈದು ದಿನಗಳು ಮುಗಿದ ನಂತರ ಆತನ ಸ್ಥಾನವು ಅಥವಾ ಸಂದರ್ಭಾನುಸಾರವಾಗಿ ಹುದ್ದೆಯು ತೆರವಾಗತಕ್ಕದ್ದು.

ಮುಖ್ಯ ಕಾರ್ಯನಿರ್ವಾಹಕನು ರಾಜೀನಾಮೆ ಪತ್ರ ನೀಡಿದ ನಂತರ ಸಮಾವೇಶಗೊಳ್ಳುವ ಮಂಡಲಿಯ ಸಭೆಯ ಮುಂದಿಡತಕ್ಕದ್ದು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು,2004ರ ನಿಯಮ ಸಂಖ್ಯೆ:6(2)ರನ್ವಯ ಸಹಕಾರಿಯ ಆಡಳಿತ ಮಂಡಲಿ ಅಥವಾ ಮುಖ್ಯ ಕಾರ್ಯನಿರ್ವಾಹಕನು ರಾಜೀನಾಮೆ ಅಂಗೀಕಾರವಾದ ದಿನಾಂಕದಿಂದ ಅಥವಾ ರಾಜೀನಾಮೆ ಅಂಗೀಕಾರವಾಗಿದೆಯೆಂದು ಭಾವಿಸಲಾದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.



## ವ್ಯಕ್ತಿತ್ವ ವಿಕಸನ ಹಾಗೂ ತರಬೇತಿ ಶಿಬಿರ

ಕರ್ನಾಟಕ ಇನ್ಸ್ಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಶ್ರೀ ಎರ್ರಿಸ್ವಾಮಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಹಾಗೂ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಇವರುಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ 19.07.2015ರಂದು ಎರಡು ಸಹಕಾರಿಗಳ ಸಿಬ್ಬಂದಿಗಳಿಗಾಗಿ ಹೋಟೆಲ್ ಶ್ರೀ ಹುಲಿಗೆಮ್ಮಾ ರೆಸಿಡೆನ್ಸಿ, ಚಿಕ್ಕೋಡಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ವ್ಯಕ್ತಿತ್ವ ವಿಕಸನ ಹಾಗೂ ತರಬೇತಿ ಶಿಬಿರ ಕಾರ್ಯಾಗಾರದ ಉದ್ಘಾಟನೆ.



# ಸದೃಢ ಸಮಾಜ ರಚನೆ ಹಾಗೂ ಮಹಿಳಾ ಸಹಕಾರಿಗಳು

ಡಾ॥ ನಂದೀಶ ವಿ. ಹಿರೇಮಠ, ಪ್ರೊಫೆಸರ್, ಸಹಕಾರಿ ತರಬೇತುದಾರರು, ಕನ್ಸಲ್ಟೆಂಟ್ ಮತ್ತು ಆಡಳಿತ ಸಲಹೆಗಾರರು, ಬೆಂಗಳೂರು.

**1. ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ :**

ನಮಗೆಲ್ಲ ತಿಳಿದಿರುವಂತೆ ಮಹಿಳೆಯರು ನಮ್ಮ ಸಮಾಜದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಾರೆ. ಮಹಿಳೆ ಇಲ್ಲದೆ (ತಾಯಿ, ಹೆಂಡತಿ, ಗೆಳತಿ, ಅಕ್ಕ, ತಂಗಿ ಮುಂತಾದವರು) ಸಮಾಜವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ.

ಆದರೆ ಮಹಿಳೆಯರಿಗೆ ದೊರಕಬೇಕಾದ ಮಹತ್ವ ದೊರಕಿಲ್ಲ. ಇದು ಕಟುವಾದ ಸತ್ಯವಾದರೂ ನಂಬಬೇಕು. ಉದಾಹರಣೆಗೆ 1992–93 ಅಂಕಿ ಅಂಶಗಳ ಪ್ರಕಾರ ಕೇವಲ 9.2% ಮನೆತನಗಳ ಒಡತಿ (ನಾಯಕಿ)ಯನ್ನು ಭಾರತದಲ್ಲಿ ಕಾಣಬಹುದು. ಆದರೆ, 35% ಬಡತನದ ರೇಖೆಗಿಂತ ಕಡಿಮೆ ಇರುವ ಮನೆತನಗಳಲ್ಲಿ ಒಡತಿ ಮಹಿಳೆ! ಇದೇ ರೀತಿ ಸಾಕ್ಷರತೆ ನೋಡಿದರೆ, 1947ರಲ್ಲಿ 12% ಇದ್ದರೆ, 2014ರಲ್ಲಿ 74% ಸಾಕ್ಷರತೆಯನ್ನು ಭಾರತದಲ್ಲಿ ಕಾಣಬಹುದು. ಕೇವಲ 3 ರಾಜ್ಯಗಳಲ್ಲಿ 90% ಹೆಚ್ಚು ಸಾಕ್ಷರತೆ ಕಾಣಬಹುದು (ಕೇರಳ, ಲಕ್ಷದ್ವೀಪ ಮತ್ತು ಮಿಜೋರಾಮ). ಆದರೆ ಭಾರತದಲ್ಲಿ 82% ಸಾಕ್ಷರತೆ ಗಂಡಸರಲ್ಲಿ ಇದ್ದರೆ, 65% ಸಾಕ್ಷರತೆಯನ್ನು ಮಹಿಳೆಯರಲ್ಲಿ ಇರುವುದು (2011 ಅಂಕಿ ಅಂಶಗಳು) ಕಂಡು ಬರುತ್ತದೆ.

**2. ಮಹಿಳೆಯರು ಭಾಗವಹಿಸದಿರಲು ಕಾರಣಗಳು :** ಭಾರತದಲ್ಲಿರುವ ನಿಯಮಗಳನ್ನು (Laws) ನೋಡಿದಾಗ, ಲಿಂಗ ಭೇದವಿಲ್ಲದಿದ್ದರೂ (Gender disparity) ನಿಜಸ್ಥಿತಿಯಲ್ಲಿ ಮಹಿಳೆಯರಿಗೆ ಸಮಾನ/ ಮುಖ್ಯ ಪಾತ್ರ ಸಿಕ್ಕಿರುವುದು ಬಹಳ ಕಡಿಮೆ.

ಸಮಾಜದಲ್ಲಿರುವ ಎಲ್ಲ ಸಂಪತ್ತುಗಳಿಗೆ ಮಹಿಳೆಗೆ ಹಕ್ಕು/ ಪಾತ್ರ ಕಡಿಮೆ. ಆದರೆ, ಕೆಲಸ/ ಜವಾಬ್ದಾರಿ ಹೆಚ್ಚಿರುವುದು ಕಂಡು ಬರುತ್ತದೆ. ಆಸ್ತಿ ಹಕ್ಕುಗಳಲ್ಲಿ ಸಮಾನತೆ ಕಡಿಮೆ ಇರುವುದು ಕಾಣಬಹುದು.

**3. ಮಹಿಳೆ ಮತ್ತು ಸಹಕಾರಿ ಕ್ಷೇತ್ರ – ಅಂತರರಾಷ್ಟ್ರೀಯ ದೃಷ್ಟಿ :**

ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ (International Cooperative Alliance) ಪ್ರಕಾರ 1995ರಲ್ಲಿ "Gender Equality in Cooperatives" ತತ್ವದ ಬಗ್ಗೆ ಒತ್ತುಕೊಟ್ಟಿರುವುದು ಕಾಣಸಿಗುತ್ತದೆ. 2002ರಲ್ಲಿ International Labour Organization Recommendation No.193 ಪ್ರಕಾರ ಸಹಕಾರಿಗಳಲ್ಲಿ ಮಹಿಳೆಯರಿಗೆ ಮಹತ್ವ ಕೊಟ್ಟು ಬೆಳವಣಿಗೆಗೆ ಎಲ್ಲ ಹಂತಗಳಲ್ಲಿಯೂ ಮಾಡಬೇಕು ಎಂಬುದನ್ನು ಕಾಣಬಹುದು.

United Nations General Assembly ಪ್ರಕಾರ 2012 ವರ್ಷವನ್ನು International Year of Cooperatives ಎಂದು ಘೋಷಣೆ ಮಾಡಿ ಸಮಗ್ರವಾಗಿ ಮಹಿಳೆಯರಿಗೂ ಮಹತ್ವ ನೀಡಬೇಕು ಎಂಬ ವಿಷಯ ಪ್ರಾಮುಖ್ಯತೆ ಪಡೆದಿದ್ದನ್ನು ನೋಡಬಹುದು.

**4. ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಗಳು :** ನಮ್ಮ ಭಾರತದ ಸಮಾಜವನ್ನು ನೋಡಿದಾಗ, ಮಹಿಳೆ ವಿವಿಧ ಕ್ಷೇತ್ರಗಳಲ್ಲಿ ಸಾಕಷ್ಟು ಕೊಡುಗೆ ನೀಡಿದ್ದಾರೆ.

a. **ಸ್ವಾತಂತ್ರ್ಯ ಹೋರಾಟದಲ್ಲಿ :** ಕಿತ್ತೂರು ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಸರೋಜಿನಿ ನಾಯ್ಡು ಹಾಗೂ ಇನ್ನೂ ಅನೇಕ ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ.

b. **ರಾಜಕೀಯ ಕ್ಷೇತ್ರ :** ಇಂದಿರಾಗಾಂಧಿ (ಪ್ರಧಾನಮಂತ್ರಿ), ಪ್ರತಿಭಾ ಪಾಟೀಲ (ರಾಷ್ಟ್ರಪತಿ), ವಸುಂದರ ರಾಜೆ (ಮುಖ್ಯಮಂತ್ರಿ), ಸುಷ್ಮಾ ಸ್ವರಾಜ್ (ಮಂತ್ರಿ) ಹಾಗೂ ಇನ್ನೂ ಹಲವಾರು ಮಹಿಳೆಯರು ರಾಜಕೀಯ ಕ್ಷೇತ್ರದ ಮುಂಚೂಣಿಯಲ್ಲಿ ಕಾಣಬಹುದು.

c. **ಕ್ರೀಡಾ ಕ್ಷೇತ್ರ :** ಪಿ.ಟಿ.ಉಷಾ (Athletics), ಕುಂಜಾರಾಣಿ ದೇವಿ (Weightlifting), ಸೈನಾ ನೆಹ್ವಾಲ್ (Badminton), ಸಾನಿಯಾ ಮಿರ್ಜಾ (Tennis), ಕರ್ಣಂ ಮಲ್ಲೇಶ್ವರಿ (Women Olympic Medalist in Weightlifting), ಮೇರಿ ಕೋಮ್ (Boxing) ಹಾಗೂ ಇನ್ನೂ ಅನೇಕ ಮಹಿಳೆಯರನ್ನು ಕ್ರೀಡಾ ಕ್ಷೇತ್ರದಲ್ಲಿ ಕಾಣಬಹುದು.

d. **ಸಾಮಾಜಿಕ ಕ್ಷೇತ್ರ :** ಮದರ್ ಥೆರೆಸ, ಆ್ಯನಿಬೆಸೆಂಟ್, ಕೈಲಾಸ್ ಸತ್ಯಾರ್ಥಿ

e. **ಸಾಹಿತ್ಯ ಕ್ಷೇತ್ರ :** ಸರೋಜಿನಿ ನಾಯ್ಡು (Nightingale of India), ಅರುಂಧತಿ ರಾಯ್ (Booker prize winner), ಅನಿತಾ ದೇಸಾಯಿ, ಶೋಭಾ ಡೇ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಇನ್ನೂ ಅನೇಕ ಮಹಿಳೆಯರಿದ್ದಾರೆ.

f. **ಉದ್ಯಮ ಕ್ಷೇತ್ರ :** ಕಿರಣ ಮಜುಮದಾರ ಶಾ (Biocon), ಚಂದಾ ಕೋಚಾರ (ICICI Bank), ಇಂದ್ರ ನೂಯಿ (Pepsico) ಹಾಗೂ ಇನ್ನೂ ಅನೇಕ ಮಹಿಳೆಯರನ್ನು ಉದ್ಯಮ ಕ್ಷೇತ್ರದಲ್ಲಿ ಕಾಣಬಹುದು.

g. **ವಿಜ್ಞಾನ ಕ್ಷೇತ್ರ :** ಮೇರಿ ಕ್ಯೂರಿ (ಎರಡು ಬಾರಿ Nobel Prize Winner) ಇನ್ನೂ ಹಲವಾರು ಮಹಿಳೆಯರು ವಿಜ್ಞಾನ ಕ್ಷೇತ್ರದ ಮುಂಚೂಣಿಯಲ್ಲಿ ಕಾಣಬಹುದು.

h. **ಸಹಕಾರ ಕ್ಷೇತ್ರ :** ಸಹಕಾರ ಕ್ಷೇತ್ರದಲ್ಲಿಯೂ ಕೂಡ ಅನೇಕ ಮಹಿಳಾ ನಾಯಕಿಯರನ್ನು ಕಾರ್ಯನಿರ್ವಹಿಸಿದ್ದಾರೆ. ಈ ಸಂಖ್ಯೆ ನಿರೀಕ್ಷಿಸಿದ ಮಟ್ಟಕ್ಕೆ ತಲುಪುತ್ತಿಲ್ಲ. ಮಹಿಳೆಯರು ಹೆಚ್ಚು ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಂಡು ನಾಯಕತ್ವವನ್ನು ಬೆಳೆಸಿಕೊಳ್ಳಲು ಅವಕಾಶಗಳಿವೆ. ಈ ಅವಕಾಶಗಳ ಬಗ್ಗೆ ಅವರುಗಳಿಗೆ ತಿಳುವಳಿಕೆ ಮಾಡಿಕೊಡುವುದು ಅಗತ್ಯ ಹಾಗೂ ಅವಕಾಶಗಳನ್ನು ಒದಗಿಸಿ ಕೊಡಲು ಸಮಾಜ, ಸರ್ಕಾರ ಹಾಗೂ ಸಂಸ್ಥೆಗಳು ನಿರಂತರ ಪ್ರಯತ್ನ ಮಾಡುವುದು ಅಗತ್ಯ. ಈ ನಿಟ್ಟಿನಲ್ಲಿ,

a. ಮಹಿಳಾ ಸದಸ್ಯತ್ವವನ್ನು ಹೆಚ್ಚಿಸಬೇಕು.

b. ಮಹಿಳಾ ಪ್ರತಿನಿಧಿಗಳು ಎಲ್ಲಾ ಹಂತಗಳಲ್ಲಿ

c. ಮಹಿಳಾ ನಾಯಕಿಯರು (CEO, President, Vice President, Director) ತಮ್ಮ ಪಾತ್ರವನ್ನು (Role) ಹಾಗೂ ಪರಿಣಾಮ (Impact)ಗಳನ್ನು ಹೆಚ್ಚಿಸುವಲ್ಲಿ ಎಲ್ಲಾ ರೀತಿಯ ಪ್ರಯತ್ನಗಳಾಗಬೇಕು.



## RBI NEWS — JULY 2015

▶▶ **K.Vittal Shetty,** B.A, DJPR, CAIIB, DBM (IIB) & MBM,(Former Chief General Manager & CEO of SUCO BANK)

Data on sectoral deployment of Bank credit collected on a monthly basis from select scheduled commercial banks, accounting for about 95 per cent of the total non-food credit deployed by all scheduled commercial banks, for the month of June 2015..

**Highlights of the data are given below :**

- On a year-on-year (y-o-y) basis, non-food bank credit increased by 7.7 per cent in June 2015 as compared with the increase of 13.0 per cent in June 2014.
- Credit to agriculture and allied activities increased by 10.6 per cent in June 2015 as compared with the increase of 18.8 per cent in June 2014.
- Credit to industry increased by 4.1 per cent in June 2015 as compared with the increase of 10.2 per cent in June 2014. Deceleration in credit growth to industry was observed in all major sub-sectors.
- Credit to the services sector increased by 6.0 per cent in June 2015 as compared with the increase of 13.6 per cent in June 2014.
- Credit to NBFCs increased by 1.6 per cent in June 2015 as compared with the increase of 16.7 per cent in June 2014.
- Personal loans increased by 16.5 per cent in June 2015 as compared with the increase of 15.2 per cent in June 2014.

| Policy Rates with effect from 2nd June 2015 | |
|---|---|
| REPO RATE | 7.25% |
| REVERSE REPO RATE | 6.25% |
| MARGINAL STANDING FACILITY RATE | 8.25% |
| BANK RATE | 8.25% |

| Reserve Ratios | |
|---|---|
| Cash Reserve Ratio | 4% |
| Statutory Reserve Ratio | 21.5% |

**Date : Jul 31, 2015**

**Scheduled Commercial Banks - Business in India**

**JULY-1--RBI modifies the Directive imposed on the HCBL Co-operative Bank Ltd., Lucknow :**

**JULY-2-RBI extends Directions on The Suri Friends' Union Co-operative Bank Ltd., Suri, West Bengal up to January 6, 2016**

**JULY-3- i) RBI imposes penalty on The Banaskantha Mercantile Co-operative Bank Ltd., Palanpur, Dist. Banaskantha (Gujarat)**

**ii) RBI issues Directions to Shri Sai Urban Cooperative Bank Ltd., Mukhed, District Nanded, Maharashtra**

**JULY-7-Directions under Section 35A of the Banking Regulation Act, 1949 (AACS) – Brahmawart Commercial Co-operative Bank Ltd., Kanpur**

**JULY-8-RBI extends Directions on Amanath Co-operative Bank Ltd., Bengaluru from July 05, 2015 to January 04, 2016**

**JULY-10-RBI extends Directions under Section 35A of the Banking Regulation Act, 1949 (AACS) - Jijamata Mahila Sahakari Bank Ltd., Satara, Maharashtra**

**JULY-15- RBI issues Directions on United India Co-operative Bank Ltd., Nagina, Bijnor (Uttar Pradesh)**

**JULY-16-RBI imposes penalty on Gujarat Mercantile Co-operative Bank Ltd., Ahmedabad (Gujarat)**

**JULY-24-RBI imposes Monetary Penalty on M/s Muthoottu Mini Financiers Pvt Ltd.**

**JULY-27----RBI issues Directions on The Mapusa Urban Co-operative Bank of Goa Ltd., Goa.**

**JULY-30-RBI further extends Directions issued to The C.K.P.Co-operative Bank Ltd., Mumbai, Maharashtra.**

**July-9-RBI releases Final Guidelines on Prepaid Payment Instruments (PPI) for Mass Transit System (PPI-MTS)**

**JULY-15-RBI constitutes a Committee on Medium-term Path on Financial Inclusion**

**JULY-16---Inscribing on Bank Notes**

**JULY-30-- Rs. 10 coins issued to commemorate "International Day of Yoga"**

**Source: RBI Website**

**kohimavittal@hotmail.com**
**Mobile: 9845699904**

ಹೆಚ್ಚಿನ ಮಾಹಿತಿಗೆ ಆರ್.ಬಿ.ಐ. ವೆಬ್‌ಸೈಟ್ ಸಂಪರ್ಕಿಸಿ

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 24



# ಸಹಕಾರಿಗಳಲ್ಲಿ ಪಾರದರ್ಶಕ ಆಡಳಿತ ವ್ಯವಸ್ಥೆಯ ಅಗತ್ಯತೆ

▸▸ **ವಿಜಯ್ ಬಿ.ಎಸ್.,** ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಲ್ಬುರ್ಗಿ ವಿಭಾಗ, ಕರಾಸೌಸಂಸನಿ.

ಇತ್ತೀಚಿನ ದಿನಗಳಲ್ಲಿ ಆಡಳಿತ ಮತ್ತು ಉತ್ತಮ ಆಡಳಿತ ಅಭಿವೃದ್ಧಿ ವಿಚಾರಗಳು ಪ್ರಮುಖ ಚರ್ಚೆಯ ವಿಷಯವಾಗಿವೆ. ಆಡಳಿತವೆಂದರೆ ಯೋಜನೆಯ ನಿರ್ಧಾರಗಳನ್ನು ಕೈಗೊಂಡು ಮತ್ತು ಅದನ್ನು ಅನುಷ್ಠಾನಗೊಳಿಸುವುದೇ ಆಗಿದೆ, ಆಡಳಿತದಲ್ಲಿ ನಡವಳಿಕೆ ಹಾಗೂ ನೈಜತೆ ಪಾಲನೆ ಅತ್ಯವಶ್ಯಕ, ಉತ್ತಮ ಆಡಳಿತವು ಪಾರದರ್ಶಕತೆ, ಪರಿಣಾಮಕಾರಿ ನ್ಯಾಯ ಸಮ್ಮತೆ ಮತ್ತು ಕಾನೂನಿನ ಪಾಲನೆಯನ್ನು ಉತ್ತೇಜಿಸುತ್ತದೆ. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಆದ್ಯತೆಗಳನ್ನು ಸಮಾಜದಲ್ಲಿ ಖಾತರಿಪಡಿಸುತ್ತದೆ ಮತ್ತು ವಿಸ್ತಾರ ಒಮ್ಮತವನ್ನು ಆದರಿಸುತ್ತದೆ. ಮಾಧ್ಯಮ ಹಾಗೂ ಕೆಳ ಸ್ತರದ ಜನರ ಅಗತ್ಯತೆಯ ಆಧಾರದ ಮೇಲೆ ತನ್ನಲ್ಲಿರುವ ಆರ್ಥಿಕ ಸಂಪನ್ಮೂಲಗಳನ್ನು ವಿಂಗಡಿಸುವ ವ್ಯವಸ್ಥೆಯೇ ಆಡಳಿತವಾಗಿರುತ್ತದೆ.

ಸಹಕಾರಿಗಳಲ್ಲಿ ಈ ತತ್ವಗಳು ಸಾಕಾರ ಗೊಳ್ಳಬೇಕಾದರೆ ತನ್ನ ಸದಸ್ಯರ ಭಾಗವಹಿಸುವಿಕೆ ಅತ್ಯವಶ್ಯಕ. ತನ್ನ ಸದಸ್ಯರ ಭಾಗವಹಿಸುವಿಕೆ ಜೊತೆಗೆ ಪಾರದರ್ಶಕ ಆಡಳಿತವು ಅಷ್ಟೇ ಮುಖ್ಯ. Man, Material, Money ಈ ಮೂರು M ಗಳ ವಿಷಯದಲ್ಲಿ ಯಾವ ಸಹಕಾರಿಯು ಪಾರದರ್ಶಕತೆಯನ್ನು ಪಾಲಿಸುತ್ತದೆಯೋ, ಅದು ತನಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಸೃಷ್ಟಿಸಿಕೊಳ್ಳುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು.

ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು ಎಂಬ ಗಾಂಧೀಜಿಯವರ ಅರ್ಥಪೂರ್ಣ ಮಾತು ಇಂದಿಗೂ ಅನ್ವಯ ವಾಗುತ್ತದೆ. ಬಹುಶಃ ಸಹಕಾರಿ ಕ್ಷೇತ್ರದ ಪಿತಾಮಹರೆನಿಸಿಕೊಂಡ ಸಿದ್ಧನಗೌಡ ಸಣ್ಣ ರಾಮನಗೌಡ ಪಾಟೀಲರವರು ಕೂಡ ಊಹಿಸದ ಮಟ್ಟಕ್ಕೆ ಇಂದು ಸಹಕಾರಿ ಕ್ಷೇತ್ರ ಬೆಳೆದು ನಿಂತಿದೆ. ಏಕೆಂದರೆ ದೇಶದ ಬೆಳವಣಿಗೆಗೆ ಸಹಕಾರಿ ಕ್ಷೇತ್ರ ನೀಡಿರುವ ಕೊಡುಗೆ ಅತ್ಯಂತ ಗಮನಾರ್ಹ. ಸಮಾಜದ ವಿವಿಧ ಸ್ತರದ ಜನತೆ ವ್ಯವಹಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಅಭಿವೃದ್ಧಿ ಸಾಧಿಸಲು ಸಹಕಾರಿ ಕ್ಷೇತ್ರವು ಬೆನ್ನೆಲುಬಾಗಿದೆ. ಇದನ್ನು ಮನಗಂಡ ವಿಶ್ವಸಂಸ್ಥೆ 2012ನ್ನು ಸಹಕಾರ ವರ್ಷವಾಗಿ ಘೋಷಿಸಿತು ಹಾಗೂ ಪ್ರತಿ ವರ್ಷ ಜುಲೈ ತಿಂಗಳ ಮೊದಲ ಶನಿವಾರವನ್ನು ಅಂತರಾಷ್ಟ್ರೀಯ ಸಹಕಾರಿ ದಿನವನ್ನಾಗಿ ಆಚರಿಸಲು ಕರೆ ನೀಡಿದೆ. ಪ್ರತಿ ವರ್ಷ ಎಷ್ಟೋ ಸಹಕಾರಿಗಳು ಹುಟ್ಟುತ್ತವೆ, ಆದರೆ ಯಾವ ಸಹಕಾರಿಗಳು ತನ್ನ ಆಡಳಿತದಲ್ಲಿ ಪಾರದರ್ಶಕತೆ ಹೊಂದಿರುತ್ತದೆಯೋ, ಅಂತಹ ಸಹಕಾರಿಗಳು ಮಾತ್ರ ಬೆಳೆಯಲು ಸಾಧ್ಯವಾಗಿದೆ.

ಸಹಕಾರಿ ಕ್ಷೇತ್ರವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸದೃಢವನ್ನಾಗಿಸಬೇಕಾಗಿದೆ. ಈಗಿರುವ ಸಹಕಾರಿ ಅಂಶಗಳ ಜೊತೆಗೆ ಆಡಳಿತದಲ್ಲೂ ಉತ್ತಮ ವ್ಯವಸ್ಥೆ ಜಾರಿಗೆ ತರಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ. ಈ ಸುಧಾರಣೆಯನ್ನು ಜಾರಿಗೊಳಿಸುವಂತೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವ ಅಗತ್ಯವಿಲ್ಲ.

ನಮ್ಮ ಸಂವಿಧಾನದ ನೀತಿ ನಿರ್ದೇಶಕ ತತ್ವಗಳನ್ನು ಜಾರಿಗೆ ತರುವಂತೆ ನ್ಯಾಯಾಲಯದಲ್ಲಿ ದಾವೆ ಹೂಡಲು ಅವಕಾಶವಿಲ್ಲದಿದ್ದರೂ ಕೂಡ, ಸರ್ಕಾರ, ಸಮಾಜದ ಹಾಗೂ ತನ್ನ ಅಸ್ತಿತ್ವಕ್ಕಾಗಿ ಅದು ಜನರ ಅಗತ್ಯತೆಗಳನ್ನು ಅರಿತು ಯೋಜನೆಗಳನ್ನು ಹಾಕಿಕೊಳ್ಳುತ್ತದೆ. ಹಾಗೇ ಸಹಕಾರಿಯಲ್ಲಿಯೂ ಕೂಡ ಆಡಳಿತ ಮಂಡಲಿಯು ಯೋಜನೆಗಳನ್ನು ರೂಪಿಸಿ, ಅಗತ್ಯಕ್ಕೆ ತಕ್ಕಂತೆ ಆಡಳಿತದಲ್ಲೂ ಬದಲಾವಣೆ ಮಾಡಿಕೊಂಡರೆ ಮಾತ್ರ ಮುಂದುವರೆಯಲು ಸಾಧ್ಯ.

ಜಗತ್ತಿನ ಅತ್ಯಂತ ಎತ್ತರವಾದ ಕಟ್ಟಡಗಳಲ್ಲಿ ಒಂದಾದ ಬುರ್ಜ ಕಲಿಪಾ (burj khalifa)ದ ಅಡಿಪಾಯ ಗಟ್ಟಿಯಾಗಿದ್ದಕ್ಕೆ ತಾನೇ ಅದು ವಿಶ್ವದ ಅತ್ಯಂತ ಎತ್ತರವಾದ ಕಟ್ಟಡ ಎಂಬ ಹೆಗ್ಗಳಿಕೆ ಪಡೆದುಕೊಂಡಿದ್ದು, ಹಾಗೇ ಸಹಕಾರಿಗಳಲ್ಲಿನ ಆಡಳಿತ ವ್ಯವಸ್ಥೆಯು ಪಾರದರ್ಶಕ ಹಾಗೂ ದಕ್ಷತೆಯಿಂದ ಕೂಡಿದ್ದರೆ ಮಾತ್ರ ಸಮಾಜದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯವಲ್ಲವೇ...? ■

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು.560 010. ದೂ: 080 – 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ : 0821 – 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831 – 2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ – 585102. ದೂ. 08472 – 270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010